


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 311 | Wednesday 01-05-2024 | E-mail : maruti.b.hosamani76@gmail.com | Page: 4 | Price : Rs. 1/-


## ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಗೆಲುವಿಗೆ ಉರುಳು ಸೇವೆ ಮಾಡಿದ ಅಭಿಮಾನಿಗಳು



**ಕೂಡ್ಲಿಗಿ :** ಬಳ್ಳಾರಿ-ವಿಜಯನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಗೆಲುವಿಗಾಗಿ ಕೂಡ್ಲಿಗಿ ತಾಲ್ಲೂಕಿನ ಕುರಿಹಟ್ಟಿ ಗ್ರಾಮದಲ್ಲಿ ಶ್ರೀ ಮಾರಿಕಾಂಬೆ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಗ್ರಾಮದ ಅಭಿಮಾನಿಗಳು ಹಾಗೂ ಕಾರ್ಯಕರ್ತರು ದೇವಿಯ ಆವರಣದಲ್ಲಿ ಉರುಳು ಸೇವೆ ನಡೆಸಿ ಪ್ರಾರ್ಥನೆ ಸಲ್ಲಿಸಿದರು. ಕಾರ್ಯಕರ್ತರಾದ ಸಿ.ಎಂ. ನಾಗರಾಜ್, ಜಿ. ಆನಂದ್ ಅವರು ಶ್ರೀ ರಾಮುಲು ಗೆಲುವಿಗಾಗಿ ಉರುಳು ಸೇವೆ ಮಾಡಿದರು ಇದೇ ರೀತಿಯಾಗಿ 2014 ರಲ್ಲಿಯೂ ಸಹ ಉರುಳು ಸೇವೆ ಮಾಡಿದ್ದರು ಆಗ ಶ್ರೀ ರಾಮುಲು ರವರು ಲಕ್ಷಾಂತರ ಮತಗಳಿಂದ ಜಯಗಳಿಸಿದ್ದರು.

ಈ ಬಾರಿಯೂ ಸಹ ಶ್ರೀ ರಾಮುಲು ಅವರು ಸುಮಾರು 2 ಲಕ್ಷದ ಮತಗಳ ಅಂತರದಿಂದ ಜಯಗಳಿಸಬೇಕೆಂದು ಊರಿನ ಯುವ ಕಾರ್ಯಕರ್ತರು ಹಾರೈಸಿದರು. ಈ ಸಂದರ್ಭದಲ್ಲಿ ಬಿಜೆಪಿ ಹಿರಿಯ ಮುಖಂಡರಾದ ಜೆ.ಎನ್ ಕೋದಂಡರಾಮು, ಜಿ.ಬೋರಯ್ಯ, ಬಿ.ಓಬಣ್ಣ, ಗೌಡ್ರು ಬೊಮ್ಮಲಿಂಗಪ್ಪ, ಮೂಲೆ ಮನೆ ಈರಣ್ಣ, ಎಚ್. ಬಿ. ಶ್ರೀಕಾಂತ್, ಎಚ್.ಬಿ.ನಾಗರಾಜ್, ಎಚ್.ಎಂ. ಬಸಣ್ಣ, ಎಚ್.ಮಹಾಂತೇಶ್ ಸೇರಿದಂತೆ ಬಿಜೆಪಿ ಕಾರ್ಯಕರ್ತರು, ಶ್ರೀರಾಮುಲು ಅಭಿಮಾನಿಗಳು ಭಾಗವಹಿಸಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ. ನ್ಯೂಸ್ ಕನ್ನಡ ಚಾನಲ್: ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ**


## ಕುಡಿಯುವ ನೀರಿನ ಹಾಹಾಕಾರ ನೀಗಿಸಿ, ಇಲ್ಲವಾದರೆ ಪಂಚಾಯಿತಿಗೆ ಬೀಗ ಹಾಕಿ ಪ್ರತಿಭಟನೆ: ರಾವುಗೌಡ ದ್ಯಾಮಗೊಂಡ



**ನಾದ ಬಿಕೆ :** ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ನಾದ ಬಿಕೆ ಗ್ರಾಮದಲ್ಲಿ ಹಲವು ದಿನಗಳಿಂದ ದಿನೆ-ದಿನೆ ನೀರಿನ ಹಾಹಾಕಾರ ಹೆಚ್ಚಾಗಿದೆ. ಒಂದು ಕಡೆ ಬಿಸಿಲಿನ ತಾಪಮಾನ ಇನ್ನೊಂದು ಕಡೆ ನೀರಿನ ಆಹಾಕಾರ ಹೆಚ್ಚಾಗಿದೆ. ಗ್ರಾಮಕ್ಕೆ ನೀರಿನ ಸಮಸ್ಯೆ ಕುರಿತು ಸಂಬಂಧಿಸಿದ ಪಂಚಾಯತ ಪಿ.ಡಿ.ಒ ಅವರಿಗೆ ಫೋನ್ ಕರೆ ಮಾಡಿದರೂ ಸ್ಪಂದನೆಗೆ ಸಿಗುತ್ತಿಲ್ಲ. ಇದರಿಂದ ನೀರಿಗಾಗಿ ಗ್ರಾಮಸ್ಥರು ಕಂಗಾಲಾಗಿದ್ದು ಸಮಸ್ಯೆ ಎರಡು ದಿನದಲ್ಲಿ ಸರಿಪಡಿಸದಿದ್ದರೆ ಗ್ರಾಮಸ್ಥರು ಸೇರಿ ಪಂಚಾಯಿತಿಗೆ ಬೀಗ ಹಾಕಿ ಉಗ್ರವಾದ ಪ್ರತಿಭಟನೆ ಮಾಡಲಾಗುವುದೆಂದು ಈ ಮೂಲಕ ಎಚ್ಚರಿಸಲಾಗಿದೆ ಎಂದು ಮಾಜಿ ಗ್ರಾಮಪಂಚಾಯತ ಸದಸ್ಯರಾದ ರಾವುಗೌಡ ದ್ಯಾಮಗೊಂಡ ಅವರು ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ. ನ್ಯೂಸ್ ಕನ್ನಡ ಚಾನಲ್: ಶಿವಪ್ಪ. ಬಿ. ಹರಿಜನ. ಇಂಡಿ.**

## ಮಲಪ್ರಭೆ ನದಿಗೆ ನೀರು ಹರಿಸುವಂತೆ ಆಗ್ರಹಿಸಿ 10 ಕ್ಕೂ ಹೆಚ್ಚು ಗ್ರಾಮಗಳ ರೈತರು: ತಹಶೀಲ್ದಾರ್ ಕಚೇರಿಗೆ ಮುತ್ತಿಗೆ



**ಹುನಗುಂದ :** ಮಲಪ್ರಭಾ ನದಿಗೆ ನೀರು ಹರಿಸುವಂತೆ ಆಗ್ರಹಿಸಿ ಚಿತ್ತರಗಿ ಗ್ರಾಮ ಸೇರಿದಂತೆ 10 ಕ್ಕೂ ಹೆಚ್ಚು ಗ್ರಾಮಗಳ ರೈತರು ತಹಶೀಲ್ದಾರ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿ ಮಂಗಳವಾರ ತಹಶೀಲ್ದಾರ ನಿಂಗಪ್ಪ ಬಿರಾದಾರ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ರೈತ ಮಲ್ಲಪ್ಪ ಬಿಸರಡ್ಡಿ ಮಾತನಾಡಿ ಇದೇ ಏ. 5 ರಿಂದ 17.ರ ವರಗೆ ಬೆಳಗಾವಿಯ ರೇಣುಕಾ ಜಲಾಶಯದಿಂದ 1.8 ಟಿಎಂಸಿ ನೀರು ಹರಿಸಲಾಗಿದ್ದರೂ ಆ ನೀರು ಕೇವಲ ಬದಾಮಿ ಮತ ಕ್ಷೇತ್ರಕ್ಕೆ ಮಾತ್ರ ನೀರು ತಲುಪಿದ್ದು.ಹುನಗುಂದ ಮತಕ್ಷೇತ್ರದ ಚಿಕ್ಕಮಾಗಿ, ಖೈರವಾಡಗಿ,ಗಂಗೂರ,ಪಾಪಥನಾಳ,ಚಿತ್ತರಗಿ,ಕಿರಸೂರ, ಹಡಗಲಿ,ಚಿಕ್ಕವಳಗಾವಿ,ಹಿರೇಮಳಗಾವಿ,ಗಂಜೀಹಾಳ,ಮೆದಿನಾಪೂರ, ಬೆಳಗಲ್ಲ, ಸಂಗಮದವರಗೆ ಇಲ್ಲಿವರೆಗೂ ನೀರು ಬಂದಿಲ್ಲ. ಇದರಿಂದ ಬಾರಿ ಬಿಸಿಲಿನಿಂದ ಕಂಗಾಲಾಗಿರುವ ಮಲಪ್ರಭೆ ನದಿಯ ಎಡ ಮತ್ತು ಬಲ ದಂಡೆಯಲ್ಲಿರುವ ಜನ ಜಾನುವಾರಗಳು, ಪಶು ಪಕ್ಷಿಗಳಿಗೆ ಕುಡಿಯುವ ನೀರಿಗಾಗಿ ಪರಿತಪಿಸುವ ಸ್ಥಿತಿ ನಿರ್ಮಾಣವಾಗಿದೆ. ನೀರು ಹರಿಸುವಂತೆ ಏ.16 ಮತ್ತು ಏ.25 ರಂದು ಎರಡು ಬಾರಿ ಬಾಗಲಕೋಟೆ ಜಿಲ್ಲಾಧಿಕಾರಿ ಅವರಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನೆಯಾಗಿಲ್ಲ ಎಂದು ಅಧಿಕಾರಿಗಳ ವಿರುದ್ಧ ಬೇಸರ ವ್ಯಕ್ತಪಡಿಸಿದರು. ನಾವು ಜನಪ್ರತಿನಿಧಿ ಮತ್ತು ಅಧಿಕಾರಿಗಳನ್ನು ದೂಷಿಸುವುದಿಲ್ಲ ಇಂತಹ ಭಯಂಕರ ಬಿಸಿಲಿಗೆ ಜನ ಜಾನುವಾರಗಳು ನೀರಿಗಾಗಿ ಹಾಹಾಕಾರ ಪಡುವ ಸ್ಥಿತಿಯನ್ನಾದರೂ ನೋಡಿ ನೀರನ್ನು ಹರಿಸಬೇಕು ಎಂದು ಒತ್ತಾಯಿಸಿದರು.

ರೈತ ಬಸವರಾಜ ಬೇವೂರ ಮಾತನಾಡಿ ಈ ಹಿಂದೆ ಆಲಮಟ್ಟಿ ಜಲಾಶಯದಿಂದ ಬಾಗಲಕೋಟಿ ವ್ಯಾಪ್ತಿಯ ಎಡ ಮತ್ತು ಬಲ ದಂಡೆಗಳ ಕಾಲುವೆಗಳಿಗೆ ನೀರು ಹರಿಸಲಾಗಿತ್ತು. ಆದರೆ ಮರೋಳ ಏತ ನೀರಾವರಿ ಕಾಲುವೆಗಳಿಗೆ ನೀರು ಹರಿಸದೇ ಇರೋದು ಇದು ಮಲತಾಯಿ ಧೋರಣೆ-ಯಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು. ಎರಡು ಮತ್ತು ಮೂರು ದಿನಗಳಲ್ಲಿ ಮಲಪ್ರಭೆ ನದಿಗೆ ಕೂಡಲ ಸಂಗಮದವರಗೆ ನೀರು ಹರಿಸದಿದ್ದರೇ ಮಲಪ್ರಭೆ ನದಿ ಪಾತ್ರದ ಜನರು ಲೋಕಸಭೆ ಚುನಾವಣೆಯ ಮತದಾನ ಬಹಿಷ್ಕರಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಈರಪ್ಪ ವಗ್ಗರ,ಬಸವರಾಜ ಪರೂತಿ,ಬಸವರಾಜ ಪಾಟೀಲ,ಶಿವಪ್ಪ ಚಲವಾದಿ,ಪರಶು ಮೇಟಿ,ಬಾಲಪ್ಪ ಕುಂದರಗಿ,ಅಶೋಕ ಪಾಟೀಲ,ವೀರಯ್ಯ ಶಿರೂರ, ಗಂಗಪ್ಪ ಶಿರೂರ,ವೀರಯ್ಯ ಲಾಯದಗುಂದಿ, ಅಯ್ಯನಗೌಡ ಪಾಟೀಲ,ಅಶೋಕ ಮಾಗಿ,ಮಲ್ಲು ಚಲವಾದಿ,ನಜೀರಸಾಬ ತೆಗ್ಗಿನಮನಿ,ಗಿರಿಯಪ್ಪ ಪೂಜಾರ ಮತ್ತು ಮಹಾಂತೇಶ ಕಠಾಣಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ. ನ್ಯೂಸ್ ಕನ್ನಡ ಚಾನಲ್ : ಮಲ್ಲಿಕಾರ್ಜುನ. ಎಂ. ಬಂಡರಗಲ್ಲ ಹುನಗುಂದ**

## ಕುಮಾರೇಶ್ವರ ಆಸ್ಪತ್ರೆಯಲ್ಲಿ ಪುನೀತ್ ರಾಜಕುಮಾರ ಹೃದಯಜ್ಯೋತಿ ಯೋಜನೆ ಆರಂಭ




**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯನ್ನು ಕರ್ನಾಟಕ ಸರ್ಕಾರದ 'ಪುನೀತ್ ರಾಜಕುಮಾರ ಹೃದಯಜ್ಯೋತಿ ಯೋಜನೆಯ' ಚಿಕಿತ್ಸಾ ಕೇಂದ್ರವಾಗಿ ಆಯ್ಕೆ ಮಾಡಲಾಗಿದೆ.

ಹೃದಯಾಘಾತದಂತಹ ಭೀಕರ ಕಾಯಿಲೆಗೆ ತಕ್ಷಣವೇ ಚಿಕಿತ್ಸೆ ನೀಡಲು ಸರ್ಕಾರ ಈ ಆರೋಗ್ಯ ಯೋಜನೆಯನ್ನು ಜಾರಿಗೆ ತಂದಿದೆ. ಈಗಾಗಲೇ 15 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಬಾಗಲಕೋಟೆ ಜಿಲ್ಲೆಯಲ್ಲಿ ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯನ್ನು ಪುನೀತ್ ರಾಜಕುಮಾರ ಹೃದಯಜ್ಯೋತಿ ಯೋಜನೆಯ 'ಚಿಕಿತ್ಸಾ ಕೇಂದ್ರ'ವೆಂದು ಪರಿಗಣಿಸಲಾಗಿದೆ. ಈ ಯೋಜನೆಯಲ್ಲಿ ಹೃದಯಾಘಾತಕ್ಕೊಳಗಾದ ರೋಗಿಗೆ ತಕ್ಷಣವೇ ತುರ್ತು ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಕುಮಾರೇಶ್ವರ ಆಸ್ಪತ್ರೆಗೆ ದಾಖಲಿಸುವ ವ್ಯವಸ್ಥೆ ಇರುತ್ತದೆ. ಬಾಗಲಕೋಟೆ, ಮುಧೋಳ, ಹುನಗುಂದ, ಯಲಬುರ್ಗಾ ಮತ್ತು ಕುಷ್ಠಗಿ ತಾಲೂಕುಗಳನ್ನು ಕುಮಾರೇಶ್ವರ ಆಸ್ಪತ್ರೆಯ ಚಿಕಿತ್ಸಾ ಕೇಂದ್ರದ ವ್ಯಾಪ್ತಿಯಲ್ಲಿ ಸೇರಿಸಲಾಗಿದೆ.

ಈ ಯೋಜನೆಯ ಮೊದಲ ಹಂತವಾಗಿ ಎಪ್ರಿಲ್ 23 ರಿಂದ 25 ರ ವರೆಗೆ ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯಲ್ಲಿ ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯರು, ನರ್ಸಿಂಗ್ ಸಿಬ್ಬಂದಿ,ಅಂಬ್ಯುಲೆನ್ಸ್ ಚಾಲಕರು ಹಾಗೂ ಸಹಾಯಕ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗುತ್ತಿದೆ. ವ್ಯಕ್ತಿಯು ಹೃದಯಾಘಾತಕ್ಕೊಳಗಾದ ಸಂದರ್ಭ ಕೈಗೊಳ್ಳಬೇಕಾದ ತುರ್ತು ಚಿಕಿತ್ಸೆಯ ಬಗ್ಗೆ ಈ ತರಬೇತಿ ಶಿಬಿರದಲ್ಲಿ ಕುಮಾರೇಶ್ವರ ಆಸ್ಪತ್ರೆಯ ಪರಿಣಿತ ವೈದ್ಯರಿಂದ ಪ್ರಾತ್ಯಕ್ಷಿಕ ತರಬೇತಿ ನೀಡಲಾಗುವುದು. ಈ ತರಬೇತಿಯನ್ನು ಜೀವರಕ್ಷಾ ಟ್ರಸ್ಟ್‌ನ ಸಹಯೋಗದಲ್ಲಿ ಆಯೋಜಿಸಲಾಗಿದೆ.

ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ ಅವರು 'ಈ ನೂತನ ಆರೋಗ್ಯ ಯೋಜನೆಯ ಅನುಷ್ಠಾನಕ್ಕಾಗಿ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯನ್ನು ಚಿಕಿತ್ಸಾ ಕೇಂದ್ರವಾಗಿ ಆಯ್ಕೆ ಮಾಡಿಕೊಂಡಿದ್ದು ಹೆಮ್ಮೆಯ ಸಂಗತಿ. ಕುಮಾರೇಶ್ವರ ಆಸ್ಪತ್ರೆಯಲ್ಲಿ ಈಗಾಗಲೇ ಹೃದಯ ಸಂಬಂಧಿತ ಕಾಯಿಲೆಗಳಿಗೆ ಅತ್ಯಂತ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಪರಿಣಿತ ಹೃದಯರೋಗ ತಜ್ಞರು ಇಲ್ಲಿ ಕಾರ್ಯನಿರ್ವಹಿಸುತ್ತಿರುವರು. ಈ ಎಲ್ಲ ಸೌಲಭ್ಯಗಳನ್ನು ಪರಿಗಣಿಸಿ ಸರ್ಕಾರ ಬಾಗಲಕೋಟೆ ಜಿಲ್ಲೆಯಲ್ಲಿ ನಮ್ಮ ಆಸ್ಪತ್ರೆಯನ್ನು ಚಿಕಿತ್ಸಾ ಕೇಂದ್ರವಾಗಿ ಗುರುತಿಸಿದೆ. ಸಾರ್ವಜನಿಕರು ಈ ಸೌಲಭ್ಯ ಪಡೆಯಬೇಕು' ಎಂದು ಹೇಳಿರುವರು.

ತರಬೇತಿ ಶಿಬಿರದ ಉದ್ಘಾಟನೆ ಸಂದರ್ಭದಲ್ಲಿ ಬಿ.ವಿ.ವಿ.ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ.ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ.ಅಶೋಕ ಮಲ್ಲಾಪೂರ, ವೈದ್ಯಕೀಯ ಅಧೀಕ್ಷಕಿ ಡಾ.ಭುವನೇಶ್ವರಿ ಯಳಮಲಿ, ಜೀವರಕ್ಷಾ ಟ್ರಸ್ಟ್ ಕೋಆರ್ಡಿನೇಟರ್ ಡಾ.ರಾಜು ನರಸಯ್ಯ ಮತ್ತು ಡಾ.ಶ್ರೀರಾಮ ಕೋರಾ ಉಪಸ್ಥಿತರಿದ್ದರು.

## ಗಂಗಪ್ಪ ಹನಮಪ್ಪ ಸತರಡ್ಡಿ ನಿಧನ



**ಬಾಗಲಕೋಟೆ :** ನಗರದ ವಿದ್ಯಾಗಿರಿಯ ಸಾಯಿ ಮಂದಿರದ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹೂಲಗೇರಿ ಗ್ರಾಮದ ನಿವಾಸಿ ಗಂಗಪ್ಪ ಹನಮಪ್ಪ ಸತರಡ್ಡಿ (85) ನಿಧನರಾದರು. ಮೃತರಿಗೆ ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಳಗವಿದೆ.

ಸಂತಾಪ: ಮಾಜಿ ಸಚಿವ ಎಸ್.ಆರ್. ಪಾಟೀಲ, ವಿದ್ಯಾಗಿರಿ ಹೇಮರಡ್ಡಿ ಮಲ್ಲಮ್ಮ ಸೇವಾ ಸಂಸ್ಥೆಯ ಅಧ್ಯಕ್ಷ ಮಹೇಶ ಕೆ. ಕಕರಡ್ಡಿ, ಸಾಯಿ ಮಂದಿರದ ಅಧ್ಯಕ್ಷ ಜಿ.ಎನ್. ಪಾಟೀಲ ಸೇರಿದಂತೆ ಇತರರು ಸಂತಾಪ ಸೂಚಿಸಿದ್ದಾರೆ.

## ಕಾರ್ಮಿಕರೇ ಜಗತ್ತಿನ ಮಹಾನ್ ಶಕ್ತಿ

**ಕಾಣದ ಕೈಗಳು ಸಾವಿರಾರು ಕೈಗೂಡಿ ದುಡಿದೊಡೆ**
**ಕಾಂಚಾಣ ಝಣಝಣ ನೆಮ್ಮದಿಯ ಜೀವನದಡೆ**
**ಎಲ್ಲಾ ಶ್ರಮಿಕ ವರ್ಗದ ಕಾರ್ಮಿಕರಿಗೆ**
**ಕಾರ್ಮಿಕ ದಿನಾಚರಣೆಯ ಶುಭಾಶಯಗಳು**

ಕಾರ್ಮಿಕ ಎಂದರೆ ಕರ್ಮಾಚಾರಿ, ಅಂದ್ರೆ ಕೆಲಸಗಾರ ಎಂದು ಅರ್ಥ. ಕಾರ್ಖಾನೆ, ಕೃಷಿ, ಕಾಮಗಾರಿ ಇದೆ ತರ ಎಲ್ಲಾ ವಿಧದ ಕೆಲಸದಲ್ಲಿ ದುಡಿಯುವ ಆಳುಗಳಿಗೆ ಕಾರ್ಮಿಕ ಎಂದು ಕರೆಯಬಹುದು. ಕಾರ್ಮಿಕ ಪದದ ಅರ್ಥವು ಕರ್ಮ ಅಂದರೆ ಕೆಲಸ. ಅದನ್ನು ನಂಬಿಕೆ ಇಟ್ಟು ಕೆಲಸವನ್ನಾಧರಿಸಿ ಬದುಕುವ ಜೀವಿ.

ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಕಾರ್ಮಿಕ ಸಂಘಗಳು ಮತ್ತು ಸಮಾಜವಾದಿ ಪಕ್ಷಗಳ ಮುಖ್ಯವಾಗಿ ಆಚರಿಸುವ ಸಂಭ್ರಮದ ಸಾರ್ವಜನಿಕ ಉತ್ಸವ ದಿನ ಅಥವಾ ಅಂತರಾಷ್ಟ್ರೀಯ ಕಾರ್ಮಿಕರ ದಿನಾಚರಣೆಯನ್ನು ಪ್ರತಿ ವರ್ಷ ಮೇ 1 ರಂದು ಪ್ರಪಂಚದ ಹಲವು ದೇಶಗಳಲ್ಲಿ ಆಚರಿಸಲಾಗುತ್ತದೆ.

ಮೇ 1 ಕಾರ್ಮಿಕರ ದಿನ ಕಠಿಣ ಪರಿಶ್ರಮದಿಂದಲೇ ದೇಶ ಕಟ್ಟುವ ಛಲಗಾರರಿವರು. ಹೀಗಾಗಿ, ಇವರಿಗಾಗಿ ಒಂದು ದಿನವನ್ನು ಮೀಸಲಿಡಲಾಗಿದೆ. ಈ ಅಪೂರ್ವ ದಿನದಂದು ಎಲ್ಲಾ ಶ್ರಮಜೀವಿಗಳಿಗೆ ಕಾರ್ಮಿಕ ದಿನಾಚರಣೆಯ ಶುಭಾಶಯಗಳು ಕೋರುವ ದಿನವಾಗಿದೆ. ಪ್ರತಿಯೊಂದು ದೇಶದ ಆರ್ಥಿಕ ಅಭಿವೃದ್ಧಿಯು ಆ ದೇಶದ ಕಾರ್ಮಿಕರ ಮೇಲೆ ಅವಲಂಬಿತವಾಗಿರುತ್ತದೆ. ದಕ್ಷತೆಯಿಂದ ಕೂಡಿದ ಕಾರ್ಮಿಕರ ವರ್ಗದಿಂದ ಮಾತ್ರ ಆ ದೇಶ ಆರ್ಥಿಕ ಪ್ರಗತಿಯನ್ನು ಸಾಧಿಸುತ್ತಿರುತ್ತದೆ.

ಕಾರ್ಮಿಕನು ತನ್ನ ಸ್ವಂತ ದುಡಿಮೆಯನ್ನು ಮಾರಾಟ ಮಾಡುವ ಮೂಲಕ ಕನಿಷ್ಠ ವೇತನವನ್ನು ಪಡೆಯುತ್ತಾನೆ ಎಂದು ನಮಗೆ ತಿಳಿದಿದೆ. ಅದಕ್ಕಾಗಿಯೇ ಪ್ರಪಂಚದಾದ್ಯಂತ ಅಂತರಾಷ್ಟ್ರೀಯ ಕಾರ್ಮಿಕ ದಿನವನ್ನು ಆಚರಿಸಲಾಗುತ್ತದೆ. ಆದ್ದರಿಂದ ಈ ದಿನ ಅಂತರಾಷ್ಟ್ರೀಯ ಕಾರ್ಮಿಕ ಸಂಘಗಳನ್ನು ಉತ್ತೇಜಿಸಲು ಮತ್ತು ಪ್ರೋತ್ಸಾಹಿಸಲು. ಹೀಗಾಗಿ, ಅವರು ಖಂಡಿತವಾಗಿಯೂ ಅರ್ಹರಾಗಿರುವುದರಿಂದ







ಸಮಾಜಕ್ಕೆ ಅವರ ಕೊಡುಗೆಯನ್ನು ಪ್ರಶಂಸಿಸಲು ಮತ್ತು ಗುರುತಿಸಲು ಇದು ವಿಶೇಷ ದಿನವಾಗಿದೆ.

ಕಾರ್ಮಿಕರ ನೋವುಗಳು : ಮೂರು ವರ್ಷಗಳ ಹಿಂದೆ ಕೊರೋನಾ ಸಂಕಷ್ಟದ ದಿನಗಳಲ್ಲಿ ಜನರ ಆರೋಗ್ಯ ರಕ್ಷಣೆಗಾಗಿ ತಮ್ಮ ಪ್ರಾಣವನ್ನು ಫಣಕ್ಕಿಟ್ಟು ಶ್ರಮಿಸಿದ ಪೌರಕಾರ್ಮಿಕರಿಗೊಂದು ಸಲಾಂ ಏಕೆಂದರೆ ಅವರು ಬಿಸಿಲು, ಮಳೆ, ಚಳಿ ಲೆಕ್ಕಿಸದೆ ಪ್ರತಿದಿನ ಬೆಳಿಗ್ಗೆ ಎದ್ದು ಸಮವಸ್ತ್ರ ಧರಿಸಿ, ಕೈಯಲ್ಲಿ ಪೊರೈಕೆ ಹಿಡಿದು ಪಟ್ಟಣ ಶುಚಿಗೊಳಿಸುವ ಕಾರ್ಮಿಕರಿಗಾಗಿ ಮೇ 1 ದಿನ ಒಂದು ಹೊಸ ಬಟ್ಟೆಯನ್ನು ಧರಿಸಿ ತಮ್ಮ ಕಷ್ಟ, ನೋವು- ನಲಿವುಗಳು ಹಂಚಿಕೊಳ್ಳಲು ಭಾವನಾತ್ಮಕ ಸಮಯ ಕಾಣಲು ಸಿಕ್ಕಿರುವ ಕಾರ್ಮಿಕರ ದಿನವಾಗಿದೆ. ತಮ್ಮ ಪ್ರಾಣವನ್ನು ಲೆಕ್ಕಿಸದೆ ಸಾರ್ವಜನಿಕರ ಪ್ರಾಣಕ್ಕೆ ಯಾವುದೇ ರೀತಿ ತೊಂದರೆಯಾಗದಂತೆ ಶ್ರಮಿಸಿದ ಜೀವಿಗಳು. ಇಡೀ ಜಗತ್ತಿಗೆ ಆವರಿಸಿರುವ ಕೊರೋನ ಮಹಾಮಾರಿಗೆ ಹಲವು ದೇಶಗಳು ಸ್ತಬ್ಧಗೊಂಡಿದವು. ಅನಿರೀಕ್ಷಿತ ಲಾಕ್ಡೌನ್ ನಿಂದ ಹಲವು ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದವು ಕಳೆದ ಲಾಕ್ಡೌನ್ ದಿನಗಳು ಜಾರಿಯಲ್ಲಿರುವಾಗ ಭಾರತದ ಆರ್ಥಿಕತೆ ಪಾತಾಳ ಸೇರಿದೆ. ಇನ್ನೂ ಸಂಘಟಿತ ಆಗುವ ಅಸಂಘಟಿತ ಕಾರ್ಮಿಕರ ಜೀವನ ಶೋಚನೀಯವಾಗಿದೆ. ಇಂತಹ ದುರಿತ ಕಾಲದಲ್ಲಿ ಬಡ ಕೂಲಿ ಕಾರ್ಮಿಕರ ಜೀವನ ಸಾಗಿಸುವುದು ಕಷ್ಟವಾಗಿತ್ತು. ಹಾಗಾಗಿ ಕೂಲಿಕಾರ್ಮಿಕರ ಬದುಕಿಗೆ ಪೂರಕವಾದ ಪರಿಹಾರ ರೂಪಿಸಲು ಸರ್ಕಾರ ಮುಂದಾಗಬೇಕು. ಕೆಲಸ ಇಲ್ಲದೆ ಗೃಹಬಂಧನದಲ್ಲಿರುವ ಅಸಂಖ್ಯಾತ ಕಾರ್ಮಿಕರ ಜೀವ ಉಳಿಸುವ ಜೊತೆಗೆ ಜೀವನ ನಿರ್ವಹಣೆಗೆ ಪೂರಕವಾದ ಪರಿಹಾರ ಒದಗಿಸುವ ಮೂಲಕ 'ಕಾರ್ಮಿಕರ ದಿನಾಚರಣೆ' ಮಹತ್ವ ಹೆಚ್ಚಿಸಬೇಕಾಗಿದೆ.

ಹಗಲು ರಾತ್ರಿ ಎಂದು ನೋಡುವುದಿಲ್ಲ. ಬಿಸಿಲು, ಮಳೆ, ಗಾಳಿಗೂ ಜಗ್ಗುವುದಿಲ್ಲ, ಕಠಿಣ ಶ್ರಮ ಸಮರ್ಪಣಾ ಭಾವಕ್ಕೆ ಇವರು ಸಾಕ್ಷಿ. ಕಷ್ಟವನ್ನು ನುಂಗಿ ಖುಷಿ ಹಂಚುವವರು ಕಾರ್ಮಿಕರು. ದೇಶ ಕಟ್ಟುವಲ್ಲಿ ಕಾರ್ಮಿಕರ ಪಾತ್ರ ಬಹಳ ಹಿರಿದು. ಕಾರ್ಮಿಕರ ಶ್ರಮದಲ್ಲಿ ದೇಶದ ಅಭಿವೃದ್ಧಿ ಅಡಗಿದೆ. ಈ ಶ್ರಮಜೀವಿಗಳೇ ಇಲ್ಲದ ದೇಶವನ್ನು ಊಹಿಸಲು ಸಾಧ್ಯವಿದೆಯೇ...? ಖಂಡಿತಾ ಇಲ್ಲ. ತಮ್ಮ ದುಡಿಮೆಯಿಂದಲೇ ತಮ್ಮ ಕುಟುಂಬವನ್ನು ಮುನ್ನೆಡೆಸುವ ಕಾರ್ಮಿಕರು ತಾವು ದುಡಿಯುತ್ತಿರುವ ಸಂಸ್ಥೆಯ ಬೆಳವಣಿಗೆಗೂ ಕಾರಣವಾಗುತ್ತಾರೆ.

ಕಾರ್ಮಿಕರ ನಲಿವುಗಳು: ಕಠಿಣ ಪರಿಶ್ರಮ ನಿಮ್ಮನ್ನು ಎಂದು ಸೋಲುವುದಕ್ಕೆ ಬಿಡದು. ಕಠಿಣ ಪರಿಶ್ರಮ ಮತ್ತು ಸಮರ್ಪಣಾ ಭಾವದಿಂದ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಗೌರವ ಸಲ್ಲಿಸುವ ದಿನ. ಇದು ಪ್ರತೀ ಕಾರ್ಮಿಕರಿಗೂ ಸಂಭ್ರಮಿಸುವ ಮತ್ತು ಪರಸ್ಪರ ಖುಷಿ ಹಂಚಿಕೊಳ್ಳುವ ಕ್ಷಣ. ಒಬ್ಬ ಕಾರ್ಮಿಕ ಅದ್ಭುತಗಳ ನಿರ್ಮಾತೃ ಮತ್ತು ಪ್ರತಿ ರಾಷ್ಟ್ರಕ್ಕೂ ದೊಡ್ಡ ಆಸ್ತಿ ಎಂದು ಹೆಮ್ಮೆ ಹೇಳುವ ಕ್ಷಣದಲ್ಲಿ ಖುಷಿ ಪಡುವ ಕ್ಷಣ.

ಇಂತಹ ಶ್ರಮಜೀವಿಗಳ ಕೆಲಸವನ್ನು ಗೌರವಿಸುವ, ಇವರ ಶ್ರಮವನ್ನು ಗುರುತಿಸುವ, ಇವರ ಕಷ್ಟಗಳನ್ನು ಸ್ಮರಿಸುವ ಸಲುವಾಗಿ ಮೇ 1 ರಂದು ಅಂತರಾಷ್ಟ್ರೀಯ ಕಾರ್ಮಿಕ ದಿನ ಎಂದು ಆಚರಿಸಲಾಗುತ್ತದೆ. ಇದನ್ನು ವರ್ಕರ್ಸ್ ಡೇ, ಮೇ ಡೇ, ಲೇಬರ್ ಡೇ ಎಂದೂ ಕರೆಯಲಾಗುತ್ತದೆ. ದೇಶದ ಅಭಿವೃದ್ಧಿಗೆ ನಿರಂತರ ಸೇವೆ ಸಲ್ಲಿಸುತ್ತಿರುವ ಜಗತ್ತಿನ ಮಹಾನ್ ಶಕ್ತಿಯಿವರು.

**ಕೈ ಕೆಸರಾದರೆ ಬಾಯಿ ಮೊಸರು,**
**ಕೈ ಕೆಸರೆಂದು ನೀ ಅಸಹ್ಯ ಪಡದಿರು,**
**ಅದರಿಂದಲೇ ನಿನ್ನೊಡಲು ತುಂಬುವುದು ಅರಿತಿರು,**
**ಬೆವರಿಳಿಸಿ ದುಡಿದಾಗಲೇ ಶ್ರಮಕ್ಕೆ ಬೆಲೆ ಸಿಗುವುದು,**
**ಕಾಲು ಚಾಚಿ ಮಲಗಿದರೆ ಹಸಿವು ನೀಗದು ನೆನಪಿರು.**
**ಕೀಳರಿಮೆ ಬಿಟ್ಟು ಹೆಮ್ಮೆಯಿಂದ ದುಡಿದರೆ ಫಲ ಸಿಗುವುದು,**
**ಶ್ರದ್ಧೆಯಿಂದ ಶ್ರಮ ವಹಿಸಿದರೆ ಬಾಯಿ ಸಿಹಿಯಾಗುವುದು,**
**ಜೀವನೋಪಾಯಕ್ಕಾಗಿ ಉದ್ಯೋಗ ಅವಶ್ಯವೆಂದು ತಿಳಿದಿರು,**
**ವೃತ್ತಿಯ ಬಗ್ಗೆ ಗೌರವ ಇರಲಿ ಎಂದೂ ಮರೆಯದಿರು,**
**ಕಷ್ಟಪಟ್ಟು ದುಡಿದಾಗಲೇ ಬಾಳು ಬಂಗಾರವಾಗುವುದು.**




ದುಡಿಮೆ ಮನುಷ್ಯನ ಘನತೆ ಮತ್ತು ಸೃಜನಶೀಲತೆಯ ಶ್ರೇಷ್ಠತೆಯನ್ನು ವ್ಯಕ್ತಪಡಿಸುವ ಏಣಿ. ತಮ್ಮ ಸ್ವಂತ ಸುಖ ಸಂತೋಷಗಳನ್ನು ತ್ಯಾಗ ಮಾಡಿ ಸಂಸ್ಥೆಯ ಏಳಿಗೆಗಾಗಿ ಹಗಲಿರುಳು ಶ್ರಮಿಸುವ "ದುಡಿಮೆಯೇ ದೇವರು" ಎಂದು ತಿಳಿದುಕೊಂಡು ಬೆವರು ಹರಿಸುವ ವರ್ಗಕ್ಕೆ ಗೌರವಪೂರ್ಣ ನಮನಗಳು. ದೇಶದ ಅಭಿವೃದ್ಧಿಗೆ ನಿರಂತರ ಸೇವೆ ಸಲ್ಲಿಸುತ್ತಿರುವ ಎಲ್ಲಾ ಶ್ರಮಜೀವಿಗಳಿಗೆ ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಶುಭಾಶಯಗಳು.

* ಕು. ಜ್ಯೋತಿ ಆನಂದ ಚಂದುಕರ
ಬಾಗಲಕೋಟ

# ಕಾಂಗ್ರೆಸ್ ಅಭ್ಯರ್ಥಿ ಸಹೋದರಿ ಸಂಪ್ರದಾ ದೇವಸ್ಥಾನಕ್ಕೆ ಭೇಟಿ



**ಜಮಖಂಡಿ :** ನಗರದ ಕುಂಚನೂರ ರಸ್ತೆಯಲ್ಲಿರುವ ಶ್ರೀ ದಾನಮ್ಮದೇವಿ ದೇವಸ್ಥಾನಕ್ಕೆ ಬಾಗಲಕೋಟ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ ಅವರ ಸಹೋದರಿ ಸಂಪ್ರದಾ ಪಾಟೀಲ ಭೇಟಿ ನೀಡಿ ದೇವಿ ದರ್ಶನ ಜೊತೆಗೆ ಮುತ್ತೈದೆಯರ ಉಡಿ ತುಂಬಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಆನಂದ ನ್ಯಾಮಗೌಡರ ಧರ್ಮಪತ್ನಿ ಅಶ್ವಿನಿ ನ್ಯಾಮಗೌಡ, ಕಾವ್ಯಾ ನ್ಯಾಮಗೌಡ ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಕಡ್ಡಾಯವಾಗಿ ಮತದಾನ ಮಾಡಬೇಕು: ಪಿಡಿಓ ಉಮೇಶ



**ಜಮಖಂಡಿ :** ತಾಲೂಕಿನ ಅಡಿಹುಡಿ ಗ್ರಾಮದ ಭಗೀರಥ ವೃತ್ತದಲ್ಲಿ ಲೋಕಸಭಾ ಚುನಾವಣೆ ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಉಮೇಶ ಎಸ್. ಸಾವಳಗಿ ಚಾಲನೆ ನೀಡಿ ಪ್ರತಿಜ್ಞಾವಿಧಿ ಬೋಧಿಸಿದರು. ಲೋಕಸಭೆ ಚುನಾವಣೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡುವಂತೆ ಕಾರ್ಯದರ್ಶಿ ಚಂದ್ರವ್ವ ಗಡೆಪ್ಪನವರ, ಆರೋಗ್ಯ ಇಲಾಖೆ ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರ, ಸ್ವಸಹಾಯ ಸಂಘಗಳ, ಮಹಿಳಾ ಒಕ್ಕೂಟದ ಸಂಘಗಳದವರು, ಎಂ.ಬಿ.ಕೆ,ಪಶು ಸಂಖಿ, ಕೃಷಿ ಸಂಖಿ, ಪಂಚಾಯತಿ ಸಿಬ್ಬಂದಿಗಳು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ನಗರದಲ್ಲಿ ಬಿಜೆಪಿಯಿಂದ ಮನೆಮನೆಗೆ ಭರ್ಜರಿ ಮತಯಾಚನೆ

**ಜಮಖಂಡಿ :** ನಗರದಲ್ಲಿ ಮಂಗಳವಾರ ಬಿಜೆಪಿ ಮುಖಂಡರು, ಕಾರ್ಯಕರ್ತರು ಲೋಕಸಭಾ ಚುನಾವಣೆ ನಿಮಿತ್ತ ಜಂಬುಕೇಶ್ವರ ಗಲ್ಲಿ ಸಹಿತ ವಿವಿಧ ಬಡಾವಣೆಯ ಮತದಾರರ ಮನೆಮನೆಗೆ ಭೇಟಿ ಬಿಜೆಪಿ ಅಭ್ಯರ್ಥಿ ಗದ್ದಿಗೌಡರ ಪರವಾಗಿ ಮತಯಾಚಿಸಿದರು.

ಡಾ.ವಿಜಯಲಕ್ಷ್ಮೀ ತುಂಗಳ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ಪ್ರಧಾನಿಯಾಗಿ ಜನಸೇವೆಯಲ್ಲಿ ತೊಡಗಲಿದ್ದಾರೆ. ದೇಶದಲ್ಲಿ ಮೋದಿ ಪ್ರಧಾನಿಯಾದರೇ, ಬಾಗಲಕೋಟೆಯಲ್ಲಿ ಪಿ.ಸಿ.ಗದ್ದಿಗೌಡರ ಸಂಸದರಾಗಲಿದ್ದಾರೆ. ದೇಶದಲ್ಲಿ ಬಿಜೆಪಿ ಮಿತ್ರಕೂಟ ಪಕ್ಷಗಳು



400 ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲವು ಸಾಧಿಸಲಿದ್ದಾರೆ ಎಂದರು.

ಕಳೆದ ವರ್ಷದ ಅವಧಿಯಲ್ಲಿ ಪ್ರಧಾನಿ ಮೋದಿ ಅವರು ಆರ್ಥಿಕ ನೀತಿ ಕಾಪಾಡುವ ಮೂಲಕ ವಿಶ್ವದಲ್ಲಿ 5ನೇ ಸ್ಥಾನದಲ್ಲಿದ್ದು, ಮುಂದಿನ ಕೆಲವು ವರ್ಷಗಳಲ್ಲಿ 3ನೇ ತಲುಪಲಿದೆ. ಪ್ರಧಾನಿ ಮೋದಿ ಕೈಗೊಂಡ ಪ್ರಮುಖ ನಿರ್ಣಯಗಳಿಂದ ದೇಶದಲ್ಲಿ ಭಯೋತ್ಪಾದನೆ ಕಡಿಮೆಯಾಗಿದೆ. ರೈತರಿಗೆ ಸಮ್ಮಾನ ಯೋಜನೆ ಅನುದಾನ ನೀಡಿ, ದೇಶದ ಕುಟುಂಬಗಳಿಗೆ ಉಚಿತವಾಗಿ ಅಕ್ಕಿ ನೀಡಲಾಗುತ್ತಿದೆ. ಮಹಿಳೆಯರ ಸುರಕ್ಷತೆಗಾಗಿ ವಿಶೇಷ ಯೋಜನೆ ಜಾರಿಗೆ ತರುವ ಮೂಲಕ ಬೇಟಿ ಪಡಾವೋ ಬೇಟಿ ಬಚಾವೋ ಮೂಲಕ ಸುರಕ್ಷತೆ ಭರವಸೆ ಹೆಚ್ಚಾಗಿದೆ ಎಂದರು.

ಡಾ.ಉಮೇಶ ಮಹಾಬಳಶೆಟ್ಟಿ ಮಾತನಾಡಿದರು. ಪ್ರಚಾರದಲ್ಲಿ ಬಿಡಿಸಿಸಿಬ್ಯಾಂಕ ನಿರ್ದೇಶಕ ಏಗಪ್ಪ ಸವದಿ, ಅರ್ಬನ ಬ್ಯಾಂಕ ನಿರ್ದೇಶಕ ಬಸವರಾಜ ಕಲೂತಿ, ನಾಗಪ್ಪ ಸನದಿ, ವಿಜಯಲಕ್ಷ್ಮೀ ಉಕುಮನಾಳ, ಕುಶಾಲ ವಾಗಮೋರೆ, ಪ್ರದೀಪ ಮಹಾಲಿಂಗಪೂರ, ಸುಭಾಷ ಲಗಳಿ, ಅಜಯ ಕಡಪಟ್ಟಿ, ರಮೇಶ ಆಲಬಾಳ, ರಾಜೇಸಾಬ ಕಡಕೋಳ, ಪ್ರಕಾಶ ಅರಕೇರಿ ಸಹಿತ ಹಲವರು ಇದ್ದರು.

# ಹಲವೆಡೆ ಸಂಭ್ರಮದ ಹನುಮ ಜಯಂತಿ

**ಮಹಾಲಿಂಗಪುರ :** ಮಂಗಳವಾರ ಪಟ್ಟಣದ ಮಾರುತೇಶ್ವರ ದೇವಸ್ಥಾನ, ಕೆಂಗೇರಿಮಡ್ಡಿ, ಜಿಎಲ್‌ಬಿಸಿ, ಬಸವನಗರ, ಬುದ್ನಿಪಿಡಿ, ಸೈದಾಪೂರ, ಬಿಸನಾಳ, ಸಂಗಾನಟ್ಟಿ ಸೇರಿದಂತೆ ಪಟ್ಟಣ ಹಾಗೂ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಹನುಮಾನ ಮಂದಿರಗಳಲ್ಲಿ ಸಂಭ್ರಮ ಸಡಗರದಿಂದ ಹನುಮಾನ ಜಯಂತಿ ಆಚರಿಸಲಾಯಿತು.



ಹನುಮ ಜಯಂತಿ ನಿಮಿತ್ಯ ಎಲ್ಲಾ ದೇವಸ್ಥಾನಗಳನ್ನು ತಳಿರು ತೋರಣ, ಹೂವುಗಳಿಂದ ಶೃಂಗರಿಸಲಾಗಿತ್ತು. ವಿಶೇಷ ಅಲಂಕಾರ ಪೂಜೆ, ಹೋಮ ಹವನ, ಮಹಿಳೆಯರಿಂದ ತೊಟ್ಟಿಲುತೂಗಿ ನಾಮಕರಣ, ಪ್ರಸಾದ ವಿತರಣೆ ಕಾರ್ಯಕ್ರಮಗಳು ಜರುಗಿದವು.

ಮುಂಜಾನೆಯಿಂದ ತಡರಾತ್ರಿವರೆಗೆ ಭಕ್ತರು ಹನುಮಾನ ದೇವಸ್ಥಾನಕ್ಕೆ ಆಗಮಿಸಿ ಎಣ್ಣೆ, ಕರ್ಪೂರ, ತುಳಸಿಮಾಲೆ, ತೆಂಗಿನಕಾಯಿ, ಸಿಹಿಪ್ರಸಾದ ನೀಡಿ, ಹನುಮಾನ ಚಾಲೀಸ್ ಪಠಿಸಿ ಭಕ್ತಿಯಿಂದ ಹನುಮ ಜಯಂತಿ ಆಚರಿಸಿದರು.



# ನೀರು ಕೊಡದಿದ್ದರೇ ಗ್ರಾಮಸ್ಥರಿಂದ ಚುನಾವಣೆ ಬಹಿಷ್ಕಾರ



**ಜಮಖಂಡಿ :** ತಾಲೂಕಿನ ಮರೆಗುದ್ದಿ ಏತ ನೀರಾವರಿ ಯೋಜನೆ ಕಳೆದ 15 ವರ್ಷಗಳಿಂದ ಪ್ರಾರಂಭಗೊಳ್ಳುವ ಸ್ಥಿತಿಯಲ್ಲಿಲ್ಲ. ನೀರಿನ ಗೋಳು ಕೇಳುವವರಿಲ್ಲ ಯಾವುದೇ ಸರಕಾರ ಈ ಬಗ್ಗೆ ಗಂಭೀರತೆ ತಗೆದುಕೊಂಡಿಲ್ಲ ಹೀಗಾಗಿ 2024ರ ಲೋಕಸಭಾ ಚುಣಾವಣೆ ಬಹಿಷ್ಕಾರ ಹಾಕಿ ಸರಕಾರಕ್ಕೆ ಬಿಸಿ ಮುಟ್ಟಿಸಬೇಕಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತ ಪಡಿಸಿದರು.

ತಾಲೂಕಿನ ಮರೆಗುದ್ದಿ ಗ್ರಾಮದ ಕರಿಸಿದ್ದೇಶ್ವರ ಗುಡಿಯಲ್ಲಿ ನಡೆದ ಸಭೆಯಲ್ಲಿ ರೈತರು ಮತ್ತು ಗ್ರಾಮಸ್ಥರು ಸಭೆ ಸೇರಿ ನೀರಿನ ಕುಂದು ಕೊರತೆಗಳನ್ನು ಚರ್ಚಿಸಿದರು. ಮರೆಗುದ್ದಿ ಏತನೀರಾವರಿ ಯೋಜನೆ ಬಗ್ಗೆ ಕಿಂಚಿತ್ತು ಕಾಳಜಿ ಈ ರಾಜಕಾರಣಿಗಳಿಗೆ, ಸರಕಾರಕ್ಕೆ, ಅಧಿಕಾರಿಗಳಿಗಿಲ್ಲ. ಈ ಭಾಗದ ರೈತರ ಬಗ್ಗೆ ಕರುಣೆಯಿಲ್ಲ, ಹೀಗಾಗಿ ಗುರುವಾರ ಬೆಳ್ಳಿಗ್ಗೆ 8 ಗಂಟೆಗೆ ಹುಲ್ಯಾಳ ಕ್ರಾಸ್ ಬಳಿ ರಸ್ತೆ ತಡೆದು ಪ್ರತಿಭಟನೆ ನಡೆಸಲಿದ್ದೇವೆ ಎಂದರು.

ನಿವೃತ್ತ ತಹಶೀಲ್ದಾರ ಬಿ.ಎಲ್.ಗೋಠೆ ಮಾತನಾಡಿ, ನಗರದಲ್ಲಿ ಅಷ್ಟೇ ಅಲ್ಲದೇ ಗ್ರಾಮೀಣ ಭಾಗದಲ್ಲಿ ನೀರಿನ ಸಮಸ್ಯೆ ಉಂಟಾಗುತ್ತಿದ್ದು, ಇನ್ನು 15 ದಿನಗಳಲ್ಲಿ ಜನ-ಜಾನುವಾರುಗಳಿಗೆ ನೀರಿನ ಕೊರತೆ ಉಂಟಾಗಲಿದೆ. ಬರಗಾಲ ಪರಿಸ್ಥಿತಿಯಿಂದ ಮರೆಗುದ್ದಿ, ಹುಣಸಿಕಟ್ಟಿ, ಹುಲ್ಯಾಳ, ಕೊಣ್ಣೂರು ಗ್ರಾಮಗಳಲ್ಲಿ ಕುಡಿಯುವ ನೀರಿಗಾಗಿ ಜನ ಪರದಾಡುವಂತಾಗಿದೆ ಎಂದರು.

ಗ್ರಾಪಂ ಅಧ್ಯಕ್ಷ ಹಣಮಂತ ಗುಡಿ ಮಾತನಾಡಿ, ಗ್ರಾಮಗಳ ಸುತ್ತಮುತ್ತಲು ಕೃಷ್ಣ ಮತ್ತು ಘಟಪ್ರಭಾ ನದಿಗಳಿದ್ದರು ನೀರಿನಿಂದ ವಂಚಿತರಾಗಿದ್ದೇವೆ. ದಿನ ಕಳೆದಂತೆ ಗ್ರಾಮಕ್ಕೆ ನೀರಿನ ತೊಂದರೆಯಾಗುತ್ತಿದೆ. ಇಲ್ಲಿಯವರೆಗೆ ಮರೆಗುದ್ದಿ ಏತ ನೀರಾವರಿ ಬಗ್ಗೆ ಚಿಂತನೆ ನಡೆಸಿಲ್ಲ. ನೀರಿಗಾಗಿ ರೈತರ ಹೋರಾಟ ನಡೆಯಲಿದ್ದು ಪ್ರತಿಭಟನೆಯನ್ನು ಹಿಂತಗೆದುಕೊಳ್ಳುವ ಎರಡು ಮಾತಿಲ್ಲ ಎಂದರು.

ಪ್ರತಿಭಟನೆಯಲ್ಲಿ ಪ್ರಕಾಶ ರಾಮಗೊಂಡ, ಮಾದೇವಗೌಡ ಪಾಟೀಲ, ಮಲ್ಲಪ್ಪ ಕಾಮಗೊಂಡ, ಬಸು ಕಳಪ್ಪಗೋಳ, ಮನೆಗೆಪ್ಪ ಕುಂಚನೂರ, ನಿಂಗಪ್ಪ ಎಣ್ಣಿ, ರಾಮನಗೌಡ ಪಾಟೀಲ, ಪಂಡಿತ ಕೋರಿ, ಶ್ರೀಶೈಲ ಭೂಮಾರ, ಉಮೇಶ ಕೋರಿ, ರಾಜು ಪಾಟೀಲ, ಮೈಬುಸಾಬ ಪೆಂಡಾರಿ ಸಹಿತ ಹಲವರು ಇದ್ದರು.

# ಮಕ್ಕಳ ಸಾಹಿತ್ಯದ ಬೇರುಗಳು ಜಾನಪದ ಸಾಹಿತ್ಯದಲ್ಲಿವೆ

**ಧಾರವಾಡ :** ಮಕ್ಕಳ ಸಾಹಿತ್ಯದ ಬೇರುಗಳು ಜಾನಪದ ಸಾಹಿತ್ಯದಲ್ಲಿದ್ದು, ಅದು ಮಾನವ ಸಾಹಿತ್ಯದ ಬುನಾದಿ ಎಂದು ಶಿಕ್ಷಕ ಶ್ರೀಧರ್ ಗಸ್ತಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಆಯೋಜಿಸಿದ್ದ ಕವಿ ಬಿ.ಕೆ. ಹೊಂಗಲ ದತ್ತಿ ಕಾರ್ಯಕ್ರಮದಲ್ಲಿಉಪನ್ಯಾಸ' ಹಾಗೂಮಕ್ಕಳ ಶ್ರೇಷ್ಠ ಕವಿ-2024? ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 'ಮಕ್ಕಳ ಸಾಹಿತ್ಯ' ವಿಷಯದ ಮೇಲೆ ಉಪನ್ಯಾಸ ನೀಡುತ್ತಾ, ಮಕ್ಕಳ ಸಾಹಿತ್ಯವು ಮಕ್ಕಳ ಮನಸ್ಸನ್ನು ಅರಳಿಸಿ ಅವರ ಭಾವನೆಗಳಿಗೆ ಸ್ಫೂರ್ತಿ ನೀಡುವಂತಿರಬೇಕು. ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ಮಕ್ಕಳ ಸಾಹಿತ್ಯ ಪೂರಕವಾಗಿದೆ. ಮಕ್ಕಳು ಸಾಹಿತ್ಯಓದುವುದರಿಂದಅವರಲ್ಲಿ ಒಳ್ಳೆಯ ಜೀವನ ಮೌಲ್ಯ, ಸಂಸ್ಕಾರಗಳು ರೂಪಗೊಳ್ಳುವವು.ವಿವೇಕ, ಒಳ್ಳೆಯ ಆಲೋಚನೆಗಳನ್ನು ಬೆಳೆಸುವ ಶಕ್ತಿ ಸಾಹಿತ್ಯಕ್ಕಿದೆ.




ಒಂದುಕಾಲದಲ್ಲಿ ಮಕ್ಕಳ ಸಾಹಿತ್ಯವು ನಿರ್ಲಕ್ಷಿಸಲ್ಪಟ್ಟದ್ದಾಗಿತ್ತು. ಅದ-ಕ್ಕೆ ಸ್ಪಷ್ಟರೂಪ ಬಂದಿದ್ದು ನವೋದಯ ಸಾಹಿತ್ಯದಕಾಲಘಟದ್ದಲ್ಲಿ.ಅಜ್ಜ-ಅಜ್ಜಿಯರು ಹೇಳುತ್ತಿದ್ದ ಪ್ರಾಸಬದ್ದ ಕಥೆಗಳು, ಆಟದ ಪದಗಳು, ಪಂಚತಂತ್ರದ ಕಥೆಗಳು, ಮಕ್ಕಳ ಮನಸ್ಸನ್ನು ಉಲ್ಲಾಸಗೊಳಿಸುತ್ತಿದ್ದವು. ಆಧುನಿಕಕಾಲದಲ್ಲಿ ಮುದ್ರಣ ಕಲೆ ಬಂದ ಮೇಲೆ ಮಕ್ಕಳ ಸಾಹಿತ್ಯ ವಿಫುಲವಾಗಿ ಬೆಳೆಯಿತು.ಮಕ್ಕಳ ಸಾಹಿತ್ಯದ ಮೇಲೆ ಆಂಗ್ಲ ಸಾಹಿತ್ಯದ ಪ್ರಭಾವವೂಇದೆ.ಮಕ್ಕಳಲ್ಲಿ ಸಾಹಿತ್ಯಿದ ಬಗ್ಗೆ ಅಭಿರುಚಿ ಬೆಳೆಸುವಲ್ಲಿ ಶಿಕ್ಷಕರ ಪಾಲಕರ ಪಾತ್ರವು ಹಿರಿದಾಗಿದೆ- ಎಂದು ಹೇಳಿದರು.

ಮುಖ್ಯಅತಿಥಿಡಾ.ರುದ್ರಣಚಿಲುಮಿ ಮಾತನಾಡಿ, ಕವಿ ಬಿ. ಕೆ. ಹೊಂಗಲ ಒಬ್ಬ ಕ್ರಿಯಾಶೀಲ ಕವಿಗಳು. ಕುಟುಂಬ ವತ್ಸಲರು.ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿಧರ್ಮಕಾಪಾಡಿಕೊಂಡು ಬಂದವರು. ಮಕ್ಕಳಿಗೆ ಪಾಠ ಬೋಧನೆಯಲ್ಲಿಜೀವತುಂಬಿ, ಹಾವಭಾವದೊಂದಿಗೆಅಭಿವ್ಯಕ್ತಿಸುತ್ತಿದ್ದಅವರ ಕಲೆ ಶ್ಲಾಘನೀಯಎಂದು ಹೇಳಿದರು.

ದಿವ್ಯಸಾನಿಧ್ಯ ವಹಿಸಿದ್ದ ಪೂಜ್ಯಡಾ.ಬಸವರಾಜದೇವರು ಆಶೀರ್ವಚನ ನೀಡುತ್ತಾ, ಮಕ್ಕಳ ಸಾಹಿತ್ಯವುಅವರ ಸಾಂಸ್ಕೃತಿಕ ಶ್ರೀಮಂತಿಕೆಗೆ ಕಾರಣವಾಗಬೇಕು.ಅ ನಿಟ್ಟಿನಲ್ಲಿ ತಂದೆ-ತಾಯಿ-ಶಿಕ್ಷಕರು ಬಾಲ್ಯದಿಂದಲೇ ಮಕ್ಕಳಲ್ಲಿ ಸಾಹಿತ್ಯದ ಬಗ್ಗೆ ಆಸಕ್ತಿ-ಅಭಿರುಚಿಗಳನ್ನು ಬೆಳೆಸುವ ಕಾರ್ಯ ಮಾಡಬೇಕುಎಂದರು.

ಮಕ್ಕಳ ಸಾಹಿತಿ ನಿಂಗಣ್ಣಕುಂಟಿ ಮಾತನಾಡಿ, ಶ್ರೇಷ್ಠ ಮಕ್ಕಳ ಸಾಹಿತಿ-2024 ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಈ ಪ್ರಶಸ್ತಿ ನನ್ನನ್ನು ಶ್ರೇಷ್ಠ ಸಾಹಿತಿಯಾಗಲು ಪುಷ್ಠಿ ನೀಡಿದೆ.ನನ್ನು ಗುರುಗಳು ಹಾಗೂ ವರಕವಿ ಬೇಂದ್ರೆಯವರು ನನ್ನ ಸಾಹಿತ್ಯಕ್ಕೆ ನಿಜವಾದ ಪ್ರೇರಕ ಶಕ್ತಿ ಎಂದು ಸ್ಮರಿಸಿಕೊಂಡರು.

ಕ.ವಿ.ವ. ಸಂಘದಅಧ್ಯಕ್ಷಚಂದ್ರಕಾಂತ ಬೆಲ್ಲದಕಾರ್ಯಕ್ರಮದಅಧ್ಯಕ್ಷತೆ ವಹಿಸಿ ಮಾತನಾಡಿದರು.ದತ್ತಿದಾನಿಗಳ ಪರವಾಗಿ ಬಿ. ಕೆ. ಹೊಂಗಲ ಮಾತನಾಡಿ, ತಮ್ಮ ವೃತ್ತಿಜೀವನದ ಅನುಭವಗಳನ್ನು ಹಂಚಿಕೊಂಡರು. ವೇದಿಕೆಯಲ್ಲಿ ಸೋಮನಾಥ ಹೊಂಗಲ, ಡಾ.ಮಾರ್ಕಂಡೇಯುದೊಡಮನಿ ಇದ್ದರು.ವೀರಣ್ಣಒಡ್ಡೀನ ಸ್ವಾಗತಿಸಿದರು.ಶಂಕರ ಹಲಗತ್ತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ಮಹೇಶ ಹೊರಕೇರಿ ನಿರೂಪಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಸತೀಶತುರಮರಿ, ಡಾ. ಧನವಂತ ಹಾಜವಗೋಳ ಹಾಗೂ ಶಿವಾನಂದ ಭಾವಿಕಟ್ಟಿಎನ್. ಎಸ್. ಯತ್ನಳ್ಳಿ, ಬಿ. ಆಯ್. ಈಳಿಗೇರ, ಶ್ರೀಧರ ಗಾಂವಕರ, ಎಸ್. ಜಿ. ಪಾಟೀಲ, ಕೆ.ಎಚ್.ನಾಯಕ, ಎಂ.ಎಂ. ಚಿಕ್ಕಮಠ, ಎಂ.ಎಸ್. ನರೇಗಲ್ಲ, ಸಿದ್ದರಾಮ ಹಿಪ್ಪರಗಿ, ಚನಬಸಪ್ಪಅವರಾದಿ, ಎಂ. ಬಿ. ಹೆಗ್ಗೇರಿ, ಹೊಂಗಲ ಕುಟುಂಬದವರು ಸೇರಿದಂತೆಅನೇಕರು ಭಾಗವಹಿಸಿದ್ದರು.

# ನೀತಿ ಸಂಹಿತೆ ಉಲ್ಲಂಘನೆ: 631 ಅಬಕಾರಿ ಪ್ರಕರಣ ದಾಖಲು

**ಬಾಗಲಕೋಟೆ :** ಪ್ರಸಕ್ತ ಲೋಕಸಭಾ ಸಾರ್ವತ್ರಿಕ ಚುನಾವಣಗೆ ನೀತಿ ಸಂಹಿತೆ ಪ್ರಾರಂಭವಾದ ದಿನಾಂಕದಿಂದ ಇಲ್ಲಿಯವರೆಗೆ ಒಟ್ಟು 631 ಅಬಕಾರಿ ಪ್ರಕರಣಗಳನ್ನು ದಾಖಲಿಸುವ ಮೂಲಕ 671 ಜನ ಆರೋಪಿಗಳನ್ನು ಬಂಧಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸದರಿ ಪ್ರಕರಣಗಳಲ್ಲಿ 16351 ಲೀಟರ ಮದ್ಯ, 133 ಲೀಟರ ಹೊರ ರಾಜ್ಯದ ಮದ್ಯ, 9627 ಲೀಟರ್ ಬಿಯರ್, 303 ಲೀಟರ ಕಳ್ಳಬಟ್ಟಿ ಸಾರಾಯಿ, 1616 ಲೀಟರ ಕೊಳೆ, 36 ದ್ವಿಚಕ್ರ ವಾಹನ, 1 ಆಟೋ, 4 ಕಾರ್, 2 ಲಾರಿಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಇವುಗಳ ಅಂದಾಜು ಮೌಲ್ಯ 1.93 ಕೋಟಿ ರೂ.ಗಳಾಗಿರುತ್ತದೆ ಎಂದು ತಿಳಿಸಿದ್ದಾರೆ.

# ಎಚ್.ಎಸ್. ಭಜಂತ್ರಿ ನೇಮಕ



**ಮಹಾಲಿಂಗಪುರ :** ಮುಂಬರುವ ಲೋಕಸಭೆ ಚುನಾವಣೆಯ ಬಾಗಲಕೋಟ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಕಾರ್ಮಿಕರನ್ನು ಸಂಘಟಿಸಲು ಸಮೀಪದ ಸೈದಾಪೂರ-ಸಮೀರವಾಡಿಯ ಕಾಂಗ್ರೆಸ್ ಮುಖಂಡ ಎಚ್.ಎಸ್.ಭಜಂತ್ರಿ ಅವರನ್ನು ಬಾಗಲಕೋಟ ಲೋಕಸಭಾ ಕ್ಷೇತ್ರದ ಸಂಯೋಜಕರನ್ನಾಗಿ ನಿಯೋಜಿಸಲಾಗಿದೆ. ಪಕ್ಷದ ಪರವಾಗಿ ಪ್ರಚಾರ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಹಾಗೂ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಸಹಕಾರಿಯಾಗಲು ಈ ಉಸ್ತುವಾರಿ ನೀಡಲಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# 69.120 ಲೀಟರ್ ಅಕ್ರಮ ಮದ್ಯ ಜಪ್ತಿ



**ಬಾಗಲಕೋಟೆ :** ಲೋಕಸಭಾ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ಅಕ್ರಮವಾಗಿ ಮನೆಯಲ್ಲಿ ಸಂಗ್ರಹಿಸಿದ್ದ 69.120 ಲೀಟರ್ ಮದ್ಯವನ್ನು ಅಬಕಾರಿ ಇಲಾಖೆ ದಾಳಿ ನಡೆಸಿ ವಶಕ್ಕೆ ಪಡೆದುಕೊಂಡಿದೆ.

ಮುಧೋಳ ವಲಯ ವ್ಯಾಪ್ತಿಯ ಬೆಳಗಲಿ ಸರ್ಕಲ್ ರಸ್ತೆ ಗಾವಲು ಸಮಯದಲ್ಲಿ ಬಂದ ಖಚಿತ ಮಾಹಿತಿ ಮೇರೆಗೆ ಮನೆಯೊಂದರ ಮೇಲೆ ದಾಳಿ ನಡೆಸಿದಾಗ ಡಿಕೆ ಮತ್ತು ಒರಿಜಿನಲ್ ಚಾಯ್ಸ್ ವಿಸ್ಕಿಯ ಸೇರಿ 8 ರಟ್ಟಿನ ಪೆಟ್ಟಿಗೆಗಳಲ್ಲಿ 576 ಟೆಟ್ರಾ ಪ್ಯಾಕೆಟ್‌ನ ಒಟ್ಟು 69.120 ಲೀಟರ್ ಮದ್ಯ ಮತ್ತು 15600 ರಾಯಲ್ ಚಾಲೆಂಜ್ ಬೀರ್ ವಶಕ್ಕೆ ಪಡೆಯಲಾಗಿದೆ. ಜಪ್ತಿ ಮಾಡಿದ ಒಟ್ಟು ಮೌಲ್ಯ 35,600 ರೂ.ಗಳದ್ದಾಗಿದೆ. ಆರೋಪಿತ ಶಂಕರ ಗುರುಬಸಪ್ಪ ಬರಿಗಿಡದ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅಬಕಾರಿ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿಜೆಪಿ ಕಾರ್ಯಕರ್ತರಿಂದ ಭರ್ಜರಿ ರೋಡ್ ಶೋ



**ಜಮಖಂಡಿ :** ನಗರದಲ್ಲಿ ಬುಧವಾರ ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಅವರು ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರೊಂದಿಗೆ ಮತದಾರರ ಮನೆಮನೆಗೆ ತೆರಳಿ ರೋಡ್ ಶೋ ಮೂಲಕ ಮತಯಾಚಿಸಿದರು.

ನಗರದ ಛತ್ರಪತಿ ಶಿವಾಜಿ ಮಹಾರಾಜರ ವೃತ್ತದಲ್ಲಿ ಶಿವಾಜಿ ಮಹಾರಾಜರ ಕಂಚಿನ ಮೂರ್ತಿಗೆ ಪುಷ್ಪ ನಮನ ಸಲ್ಲಿಸಿದ ನಂತರ ಶಾಸಕ ಜಗದೀಶ ಗುಡಗುಂಟಿ ರೋಡ್ ಶೋಗೆ ಚಾಲನೆ ನೀಡಿದರು. ನಂತರ ಅಕ್ಕಿಪೇಠೆ, ಗವಳಿ ಗಲ್ಲಿ, ರಾಮದೇವ ಗಲ್ಲಿ, ಓಲೇಮಠ, ಸಾಬಡೆ ಗಲ್ಲಿ, ಅರಳಿಕಟ್ಟಿ, ಹನುಮಾನ ಚೌಕ, ಸರಾಫ ಬಜಾರ, ಥೇಟರ ಚೌಕ, ಎ.ಜಿ.ದೇಸಾಯಿ ವೃತ್ತದ ರೋಡ್ ಶೋ ಮೂಲಕ ಮತಯಾಚಿಸಿದರು.

ರೋಡ್ ಶೋದಲ್ಲಿ ಮಾಜಿಶಾಸಕ ಶ್ರೀಕಾಂತ ಕುಲಕರ್ಣಿ, ವಿಧಾನ ಪರಿಷತ್ ಮಾಜಿಸದಸ್ಯ ಜಿ.ಎಸ್. ನ್ಯಾಮಗೌಡ, ಡಾ.ಉಮೇಶ ಮಹಾಬಳಶೆಟ್ಟಿ, ಡಾ.ವಿಜಯಲಕ್ಷ್ಮೀ ತುಂಗಳ, ಡಾ.ರಂಗನಾಥ ಸೋಲವಾಲ್ಕರ, ಬಸವರಾಜಕಲೂತಿ, ಜೆ.ಡಿ.ಎಸ್ ಮುಖಂಡ ಚನಬಸು ಕತಾಟಿ, ಬಸವರಾಜ ಬಿರಾದಾರ, ವಿಜಯಲಕ್ಷ್ಮೀ ಉಕುಮನಾಳ, ಕುಶಾಲ ವಾಘ್ಮೋರೆ, ಹೀರಾ ಜಾಧವ, ಬಾಲು ನಾಗೋಣಿ, ಪಂಡಿತ ಝುಲಪಿ, ಸಂತೋಷ ಭೋಸಲೆ, ಡಾ.ರಾಕೇಶ ಲಾಡ, ಅಜಯ ಕಡಪಟ್ಟಿ, ಗುರುಪಾದ ಮೆಂಡಿಗೇರಿ, ಶಂಕರ ಕಾಳೆ, ಗಣೇಶ ಶಿರಗಣ್ಣವರ, ನಾಗಪ್ಪ ಸನದಿ, ಗೀತಾ ಸೂರ್ಯವಂಶಿ, ಸಾವಿತ್ರಿ ಗೋರನಾಳ, ಪೂಜಾ ವಾಳ್ವೇಕರ, ಮಹಾನಂದಾ ಪಾಯಗೊಂಡ, ಪ್ರಕಾಶ ಅರಕೇರಿ, ಶ್ರೀಧರ ಕಂಬಿ ಸಹಿತ ಹಲವರು ಇದ್ದರು.

# ಸೈಕಲ್ ಜಾಥಾ ಮೂಲಕ ಮತದಾನ ಜಾಗೃತಿ



**ಮಹಾಲಿಂಗಪುರ :** ಜಿಲ್ಲಾ ಸ್ವೀಪ್ ಸಮಿತಿ ಬಾಗಲಕೋಟೆ, ತಾಲೂಕ ಸ್ವೀಪ್ ಸಮಿತಿ ಮುಧೋಳ ಹಾಗೂ ರನ್ನಬೆಳಗಲಿ ಪಟ್ಟಣ ಪಂಚಾಯತ ಕಾರ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಮತದಾನ ಜಾಗೃತಿಗಾಗಿ ಸೈಕಲ್ ಜಾತಾ ಮತ್ತು ಪ್ರತಿಜ್ಞಾವಿಧಿ ಬೋಧನಾ ಕಾರ್ಯಕ್ರಮ ಜರುಗಿತು.

ಮತದಾನ ಜಾಗೃತಿಯ ಸೈಕಲ್ ಜಾತ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಮುಧೋಳ ಕ್ಷೇತ್ರದ ಸಹಾಯಕ ಚುನಾವಣಾ ಅಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ ಮೇ 7 ರಂದು ತಪ್ಪದೆ ಎಲ್ಲರೂ ಮತದಾನ ಮಾಡೋಣ. ಚುನಾವಣೆ ಪ್ರಜಾಪ್ರಭುತ್ವದ ಮಹತ್ವದ ಘಟ್ಟವಾಗಿದೆ. ಆದರಿಂದ ಇಲ್ಲಿ ಸೇರಿದ ತಾವೆಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು.ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ನಮ್ಮ ಸ್ವಾಭಿಮಾನವನ್ನು ಕಳೆದುಕೊಳ್ಳಲಾರದೆ, ಸಂವಿಧಾನ ನೀಡಿದ ಮಹತ್ವದ ವರದಾನವಾದ ಮತದಾನ ಮಾಡುವ ಮೂಲಕ ದೇಶದ ಭದ್ರತೆಗೆ ಕೈಜೋಡಿಸೋಣ ಎಂದರು.

ಮುಧೋಳ ತಹಶೀಲ್ದಾರ ವಿನೋದ ಹತ್ತಳ್ಳಿ ವರುಮಾನವ ಸರಪಳಿಯ ನಿರ್ಮಿಸಿ ಸೇರಿದ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿ ಸಮೂಹಕ್ಕೆ, ಅಧಿಕಾರಿ ಮತ್ತು ಸಾರ್ವಜನಿಕರಿಗೆ ಮತದಾನದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ನಂತರ ವಿದ್ಯಾರ್ಥಿಗಳ ಜೊತೆಗೆ ಎಲ್ಲಾ ಅಧಿಕಾರಿಗಳು ಸೈಕಲ್ ತುಳಿಯುತ್ತಾ ಮತದಾನ ಜಾಗೃತಿಯ ಘೋಷವಾಕ್ಯಗಳನ್ನು ಹೇಳುತ್ತಾ ಪಟ್ಟಣದ ಪ್ರಮುಖ ಬೀದಿಯಲ್ಲಿ ಸಂಚರಿಸಿ, ವಿಶೇಷ ಮತಗಟ್ಟೆಗಳಿಗೆ ಭೇಟಿಕೊಟ್ಟು ಮತಗಟ್ಟೆಗಳ ವ್ಯವಸ್ಥೆಯನ್ನ ವೀಕ್ಷಣೆ ಮಾಡಿದರು.

ಪಪಂ ಮುಖ್ಯಾಧಿಕಾರಿ ನಾಮದೇವ ಲಮಾಣಿ, ಚುನಾವಣಾ ಸೆಕ್ಟರ್ ಆಫೀಸರಾದ ಎಸ್.ಎಂ. ಸುತಾರ, ಗ್ರಾಮ ಆಡಳಿತಾಧಿಕಾರಿ ಬಿ.ಎಂ.ಪಾಟೀಲ, ಸ್ಕೌಟ್ ಮಾಸ್ಟರ್ ಎಸ್.ಬಿ.ರಡರಟ್ಟಿ, ಪಿ.ಡಿ.ನಾಗನೂರು, ಎಸ್.ಎಲ್.ಕಟಾರಿ, ಆರ್.ಎ. ತಳವಾರ, ರಮೇಶ ಪಾಟೀಲ, ಬಾಬು ಜಕಾತಿ, ರಾಜು ಮುಗಳಖೊಡ,ಸಚಿನ ಕಾಸರ, ಎಸ್.ಬಿ.ಚೌದ್ರಿ, ವಿಠ್ಠಲ ಪೂಜೇರಿ, ರವಿ ಭಜಂತ್ರಿ, ಬಾಳಪ್ಪ ಹೊಸೂರ, ಸೈದು ಮಾಂಗ, ಗಿರೀಶ ಮೇತ್ರಿ, ಪುಟ್ಟು ದೊಡ್ಡಮನಿ, ರಾಘವೇಂದ್ರ ನೀಲಣ್ಣವರ ಸೇರಿದಂತೆ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು, ಅಧಿಕಾರಿಗಳು,ಸಾರ್ವಜನಿಕರು ಇದ್ದರು.

# ಮುಚಖಂಡಿ ಶಾಲಾ ಶಿಕ್ಷಕಿ ಸುನಂದಾ ಜಾಲವಾದಿ ಬಿಜಿವಿಎಸ್ ಜಿಲ್ಲಾ ಅಧ್ಯಕ್ಷರಾಗಿ ಆಯ್ಕೆ



**ಬಾಗಲಕೋಟೆ :** ಭಾರತ ಜ್ಞಾನ ವಿಜ್ಞಾನ ಸಮಿತಿ0ಯ ಬಾಗಲಕೋಟ ಜಿಲ್ಲೆ0ಯ ಜಿಲ್ಲಾ ಅಧ್ಯಕ್ಷರಾಗಿ ಬಾಗಲಕೋಟೆ0ಯ ಮುಚಖಂಡಿ ಸರಕಾರಿ ಮಾದರಿ ಪ್ರಾಥಮಿಕ ಶಾಲೆ0ಯ ಕ್ರಿ0ಯಾಶೀಲ ಶಿಕ್ಷಕಿ ಸುನಂದಾ ಜಾಲವಾದಿ0ಯವರನ್ನು ಬಾಗಲಕೋಟೆ0ಯಲ್ಲಿ ಜರುಗಿದ ಸರ್ವಸದಸ್ಯರ ಸಭೆ0ಯಲ್ಲಿ ಸರ್ವಾನುಮತದಿಂದ ಆ0ಯ್ಕೆ ಮಾಡಲಾಗಿದೆ ಎಂದು ಭಾರತ ಜ್ಞಾನ ವಿಜ್ಞಾನ ಸಮಿತಿ0ಯ ರಾಜ್ಯ ಘಟಕದ ಸದಸ್ಯ ಎಲ್ ಐ ಲಕ್ಕಮ್ಮನವರ ತಿಳಿಸಿದರು.

ಮಕ್ಕಳ ವಿಜ್ಞಾನ ಹಬ್ಬ ಹಾಗೂ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನದಂತಹ ಹತ್ತು ಹಲವು ಕಾ0ರ್ಯಕ್ರಮದಲ್ಲಿ ಪಾಲ್ಗೊಂಡು, 0ಯಶಸ್ವಿ0ಯಾಗಿ ಕಾ0ರ್ಯಕ್ರಮ ರೂಪಿಸಿರುವ ಸುನಂದಾ ಜಾಲವಾದಿ, ಒಳ್ಳೆ0ಯ ಗಾ0ಯಕಿ, ಚೇತನ ಫೌಂಡೇಶನ್ ಹುಬ್ಬಳ್ಳಿ ಇವರಿಂದ ಶಿಕ್ಷಕರತ್ನ , ಪುನೀತ್ ಪ್ರಶಸ್ತಿ, ಖ್ಯಾತ ಗಾ0ಯಕಿ ಪ್ರಶಸ್ತಿ ಪಡೆದಿರುವ ಇವರು ಜಿಲ್ಲೆ0ಯ ಎಲ್ಲಾ ತಾಲೂಕಿನ ಪರಿಚ0ಯ ಇವರಿಗಿದೆ ಎಂದು ಲಕ್ಕಮ್ಮನವರ ತಿಳಿಸಿದರು.

ಜೂನ ತಿಂಗಳಿನಲ್ಲಿ ಜರುಗಲಿರುವ ಮಕ್ಕಳ ಸಾಹಿತ್ಯ ಸಂಭ್ರಮವನ್ನು ಬಾಗಲಕೋಟ ಜಿಲ್ಲೆ0ಯಲ್ಲಿ ಅತ್ಯಂತ 0ಯಶಸ್ವಿ0ಯಾಗಿ ಸಂಘಟಿಸಲು, ಜಿಲ್ಲೆ0ಯ ಕ್ರಿ0ಯಾಶೀಲ ಶಿಕ್ಷಕರಾದ ಡಾ,ಖಾಡೆ ಎಸ್ ಆರ್ ಎಮ್ಮಿಮಠ ಬಿಇಒ ಎಂ ಎಸ್ ಬಡದಾನಿ ಮುಂತಾದವರ ಸಲಹೆ ಪಡೆದು, ಬಿಜಿವಿಎಸ್ ಸಂಘಟನೆ0ಯನ್ನು ಪ್ರಗತಿಪಥದತ್ತ ಕೊಂಡೊ0ಯ್ಯಬೇಕು, ಇದು ಶಿಕ್ಷಕರ ಸಂಘಟನೆ0ಯಲ್ಲ, ಇದೊಂದು ಸರ್ವಜನಾಂಗದ ವಿಜ್ಞಾನ ಆಸಕ್ತರ ಸಂಘಟನೆ0ಯಾಗಿದೆ ಎಂದು ಲಕ್ಕಮ್ಮನವರ ತಿಳಿಸಿದರು.

ಭಾರತ ಜ್ಞಾನ ವಿಜ್ಞಾನ ಸಮಿತಿ ಭಾಗಲಕೋಟೆ0ಯ ಜಿಲ್ಲಾ ಅಧ್ಯಕ್ಷರಾಗಿ ಸುನಂದಾ ಜಾಲವಾದಿ ಪ್ರಧಾನ ಕಾ0ರ್ಯದರ್ಶಿ0ಯಾಗಿ ಜಿಲ್ಲೆ0ಯ ಅತ್ಯಂತ ಕ್ರಿ0ಯಾಶೀಲ ಶಿಕ್ಷಕಿ ನಿರ್ಮಲಾ ಪತ್ತಾರ

**ಉಪಾಧ್ಯಕ್ಷರು:** ಡಾ:ವ್ಹಿ.ಆರ್.0ಯಡಹಳ್ಳಿ ಪ್ರಿ0ಯಾ ಕಟ್ಟಿ ಕೋಶಾಧ್ಯಕ್ಷರು: ರೇಣುಕಾ,ಡಿಗ್ಗಿ ಸಹ ಕಾ0ರ್ಯದರ್ಶಿಗಳು: ಡಾ:ದ್ವಾರಕಾ ಬೆಳ್ಳಣ್ಣವರ ಕೀರ್ತಿ ಕಟ್ಟಿಮನಿ

**ಜಿಲ್ಲಾ ಪದಾಧಿಕಾರಿಗಳು :** ಪಾಂಡುರಂಗ ಸಣ್ಣಪ್ಪನವರ ಎಮ್ ಎಸ್ ಅಳ್ಳಿಮಟ್ಟಿ ಎಚ್ ಎನ್ ಬಿರಾದಾರ ರಮೇಶ ಭಜಂತ್ರಿ ಎಸ್ ಎಚ್ ಕಂದಗಲ್ ರಾಹುಲ್ ಚವ್ಹಾಣ ಅಶೋಕ ಬಳ್ಳಾ ಹಣಮಂತಗೌಡ ಬಳಗಾನೂರ ಬಸಮ್ಮ ನಾಟಿಕಾರ ಕಸ್ತೂರಿ ಪತ್ತಾರ ಸಂಗಮೇಶ ಅರಕೇರಿ ಪರಶುರಾಮ ಲಮಾಣಿ. ಆ0ಯ್ಕೆ0ಯಾಗಿದ್ದು ಒಟ್ಟು 102 ಜನ ವಿವಿಧ ಇಲಾಖೆ ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಬಿಜಿವಿಎಸ್ ಸದಸ್ಯತ್ವವನ್ನು ಪಡೆದಿದ್ದಾರೆ ಎಂದು ಜಿಲ್ಲಾ ಅಧ್ಯಕ್ಷರಾದ ಸುನಂದಾ ಜಾಲವಾದಿ, ಪ್ರಧಾನ ಕಾ0ರ್ಯದರ್ಶಿ ನಿರ್ಮಲಾ ಪತ್ತಾರ ಪ್ರಕಟಣೆ0ಯಲ್ಲಿ ತಿಳಿಸಿದರು.

# ಅದ್ದೂರಿಯಾಗಿ ಜರುಗಿದ ಕಿಕ್ಕೇರಮ್ಮನವರ ಬ್ರಹ್ಮ ರಥೋತ್ಸವ



**ಕೃಷ್ಣರಾಜಪೇಟೆ :** ಕಿಕ್ಕೇರಮ್ಮನವರ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಂಗಮದಲ್ಲಿ ಪಟ್ಟಣದ ಪ್ರಮುಖ ಬೀದಿಯಲ್ಲಿ ಕಲಾ ತಂಡದೊಂದಿಗೆ ರಥೋತ್ಸವವು ಅದ್ದೂರಿಯಾಗಿ ನೆಡೆಯಿತು.

ತಾಲ್ಲೂಕಿನ ಜೋಡಿ ಗ್ರಾಮಗಳಾದ ಕಿಕ್ಕೇರಿ–ಲಕ್ಷ್ಮೀಪುರ ಗ್ರಾಮಗಳ ಮಹಾಲಕ್ಷ್ಮೀ(ಕಿಕ್ಕೇರಮ್ಮ) ಅಮ್ಮನವರ ಬ್ರಹ್ಮ ರಥೋತ್ಸವದಲ್ಲಿ ಎತ್ತ ನೋಡಿ–ದರೂ ಜನ ಸಾಗರ, ಭಕ್ತರ ಭಾವೈಕ್ಯ ಸಂಗಮ, ಪಕ್ಷಾತೀತವಾಗಿ ಜನಸಮೂಹ ಕಾಣಿಸಿತು. ಮಹಾಲಕ್ಷ್ಮೀ, ಕಿಕ್ಕೇರಮ್ಮ, ಲಕ್ಕಮ್ಮ ಉಘೇ ಉಘೇ ಎಂದು ಜೈಕಾರ ಹಾಕುತ್ತ ಸಾಗುತ್ತಿದ್ದ ನೋಟ ಭಕ್ತಿ ಶಕ್ತಿಯ ದೇವಿಯ ಮಹಿಮೆಯನ್ನು ಸಾರುವಂತಿತ್ತು. ಸುಮಾರು ಒಂದು ಕಿ.ಮೀ.ದೂರದಲ್ಲಿನ ಊರ ಹೊರಗಿನ ಅಮ್ಮನವರ ಗುಡಿಯವರೆಗೆ ಕಿಕ್ಕೇರಿಯ ಅಂಗಡಿಬೀದಿಯಿಂದ ಸಾಗಿದ ಮಹಾರಥವನ್ನು ಕಣ್ತುಂಬಿಕೊಳ್ಳಲು ರಸ್ತೆಯ ಇಕ್ಕೆಲಗಳಲ್ಲಿ ಜನಸಾಗರವೇ ನೆರೆದಿತ್ತು. ರಂಗು ರಂಗಿನ ಜರತಾರಿಗಳ ಧ್ವಜಕೇಸರಿ, ಸುಗಂಧಪುಷ್ಪಗಳ ಅಲಂಕೃತ ಮಾಲೆಯಲ್ಲಿ ದೇವಿ ರಥಾರೂಢಳಾಗಿ ಸಾಗುತ್ತಿದ್ದ ನೋಟವನ್ನು ಭಕ್ತರು ಕಣ್ತುಂಬಿಕೊಂಡು ಹಣ್ಣು, ಜವನ ಎಸೆದು ಭಕ್ತಿ ಭಾವ ಮೆರೆದರು.

ವಿವಿಧ ಸಂಘ ಸಂಸ್ಥೆ, ದಾನಿಗಳಿಂದ ಅಲ್ಲಲ್ಲಿ ರಸಾಯನ, ಮೊಸರನ್ನ, ನೀರುಮಜ್ಜಿಗೆ, ಪಾನಕ, ಫ್ರೂಟ್ ಸಲಾಡ್, ಸಿಹಿತಿನಿಸು, ಹಣ್ಣು ತುಪ್ಪವನ್ನು ಭಕ್ತರಿಗೆ ನೀಡಿ ಬಿರುಬಿಸಿಲಿನಿಂದ ಬಸವಳಿದವರ ಹಸಿವು, ದಾಹ ತಣಿಸಿದರು.

ಈ ಸಂಧರ್ಭದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಉಪಾದ್ಯಕ್ಷ ಕೆಎಸ್ ಪ್ರಭಾಕರ್, ಕೆ.ಪಿ.ಸಿ.ಸಿ ಸದಸ್ಯ ಕಿಕ್ಕೇರಿ ಸುರೇಶ್, ಶ್ರೀ ಸುಬ್ರಹ್ಮಣ್ಯ ಸೇವಾ ಟ್ರಸ್ಟ್ ಅದ್ಯಕ್ಷ ಬಿ.ಎಂ ಕಿರಣ್ ಗ್ರಾಮ ಪಂಚಾಯತಿ ಮಾಜಿ ಅದ್ಯಕ್ಷ ಚಂದ್ರೇಗೌಡ, ಗ್ರಾಮದ ಹಿರಿಯ ಮುಖಂಡರಾದ ನಿಂಗಪ್ಪ, ಶಿಕ್ಷಕರಾದ ಕುಮಾರ್, ಮುಖಂಡರಾದ ನಂಜೇಗೌಡ್ರು, ಸ್ವಾಮಿ, ರೇವಣ್ಣ, ದೇವರಾಜು, ಮಂಜೇಗೌಡ್ರು, ಯೋಗೇಶ್, ಜಯರಾಮು, ಲಕ್ಕೇಗೌಡ್ರು, ರಾಮೇಗೌಡ್ರು, ರಂಗೇಗೌಡ್ರು, ಸಿದ್ದರಾಮೇಗೌಡ್ರು, ಅರ್ಚಕರಾದ ಕಿಕ್ಕೇರಿಗೌರು, ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು, ಮುಖಂಡರು ಭಾಗವಹಿಸಿದ್ದರು.

# ಪಟ್ಟಣದಲ್ಲಿ 34 ಮತಗಟ್ಟೆ ಸ್ಥಾಪನೆ



**ಮಹಾಲಿಂಗಪುರ :** ಲೋಕಸಭಾಚುನಾವಣೆ ಹಿನ್ನೆಲೆ ಮತದಾನಕ್ಕಾಗಿ ಪಟ್ಟಣದಲ್ಲಿ 34 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, ಮತದಾನ ಜಾಗೃತಿಕುರಿತು ಮತಗಟ್ಟೆಗಳನ್ನು ವರ್ಲಿ ಚಿತ್ರಗಳಿಂದ ಶೃಂಗರಿಸಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಈರಣ್ಣದಡ್ಡಿ ತಿಳಿಸಿದರು.

ಪಟ್ಟಣದಲ್ಲಿ ಸ್ಥಾಪಿಸಲಾದ ವಿವಿಧಮತಗಟ್ಟೆಗಳಿಗೆ ಭೇಟಿ ನೀಡಿದ ಅವರು ಮಾತನಾಡಿ, ಮತಗಟ್ಟೆಗಳಲ್ಲಿ ವಿಶ್ರಾಂತಿ ಕೊಠಡಿ, ರ್‍ಯಾಂಪ್, ಕುಡಿಯುವ ನೀರು ಹಾಗೂ ಅಗತ್ಯಇರುವ ಮತಗಟ್ಟೆಗಳಲ್ಲಿ ಶಾಮಿಯಾನ ವ್ಯವಸ್ಥೆ ಮಾಡಲಾಗುವುದು.ಮಹಿಳಾ ಮತದಾರರು ಅಧಿಕ ಸಂಖ್ಯೆಯಲ್ಲಿರುವ ಕೆಂಗೇರಿಮಡ್ಡಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 192ನೇ ಮತಗಟ್ಟೆಯನ್ನು ಸಖಿ ಮತಗಟ್ಟೆಯಾಗಿ ಪರಿವರ್ತಿಸಲಾಗುವುದು ಎಂದರು.

ಮತದಾನ ಜಾಗೃತಿ ಕುರಿತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜಾಥಾ, ರಂಗೋಲಿ ಬಿಡಿಸುವಕಾರ್ಯಕ್ರಮ, ಬೈಕ್‌ರ್‍ಯಾಲಿ, ಮನೆ ಮನೆಗೆ ಕರಪತ್ರ ವಿತರಣೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮತದಾರರಲ್ಲಿ ಜಾಗೃತಿ ಮೂಡಿಸಲಾಗಿದೆ ಎಂದರು.

ಸಿಆರ್‌ಪಿ ಎಸ್.ಎನ್.ಬ್ಯಾಳಿ, ಪುರಸಭೆ ವ್ಯವಸ್ಥಾಪಕ ಎಸ್. ಎನ್.ಪಾಟೀಲ, ಚಿದಾನಂದ ಮಠಪತಿ, ಎಂ.ಎಂ.ಮುಗಳಖೋಡ, ಎಂ.ಎಸ್.ಮುಲ್ಲಾ, ಶಿವು ಬುರುಡ ಸೇರಿದಂತೆ ಹಲವರು ಇದ್ದರು.

# ನ್ಯಾಯವಾದಿ ಎ.ವಿ.ಕಣವಿ ಗೆಲುವು ಖಚಿತ: ಅಂದನಗೌಡ ಮಾಲಿಪಾಟೀಲ್



**ಕೊಪ್ಪಳ :** ಜಿಲ್ಲಾ ವಕೀಲರ ಸಂಘದ ಅಭಿವೃದ್ದಿಗೆ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷದ ಸ್ಥಾನ ಅಭ್ಯರ್ಥಿ ಎ.ವಿ.ಕಣವಿ ಅವರ ಗೆಲುವು ಖಚಿತ ಎಂದು ನ್ಯಾಯವಾದಿ ಅಂದನಗೌಡ ಮಾಲಿಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅವರು ಪತ್ರಿಕೆಯೊಂದಿಗೆ ಮಾತನಾಡಿ ಎ.ವಿ.ಕಣವಿ ಅವರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾಗಿ ಎಲ್ಲಾ ಹಿರಿಯ ಹಾಗೂ ಕಿರಿಯ ವಕೀಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮವಾಗಿ ಕಾರ್ಯನಿರ್ವಹಿಸಿದ್ದು ನೂತನ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದ ಕಟ್ಟಡದ ಭೂಮಿಪೂಜೆ ನೆರವೇರಿದ್ದು. ವಕೀಲರ ಸಮಸ್ಯೆಗೆ ಸೂಕ್ತ ಸ್ಪಂದನೆ ನೀಡಿದ್ದು, ಎಲ್ಲಾ ವಕೀಲರೊಂದಿಗೆ ಉತ್ತಮ ಸಹಕಾರ ಬಾಂಧವ್ಯ ಹೊಂದಿದ್ದು ಇವರು ಜಿಲ್ಲಾ ವಕೀಲರ ಸಂಘದ ಅಭಿವೃದ್ಧಿಗೆ ಶ್ರಮಿಸಲು ಎಲ್ಲಾರೂ ಸೇರಿ ಮತ್ತೊಂದು ಅವಕಾಶ ನೀಡಬೇಕಾಗಿದೆ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಸ್ಥಾನಕ್ಕೆ ಪಿ.ವಿ.ಪರತ್‌ಗೌಡ್ರು, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಪ್ರಕಾಶ ಎಲ್.ಹಾದಿಮನಿ, ಜಂಟೀ ಕಾರ್ಯದರ್ಶಿ ಸ್ಥಾನಕ್ಕೆ ಗುರುರಾಜ್ ಎನ್.ಜೋಷಿ, ಖಚಾಂಚಿ ಸ್ಥಾನಕ್ಕೆ ಬಿ.ಹೆಚ್.ಮೇಲುಸಕ್ಕರಿ ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದ್ದಾರೆ.

# ನಮ್ಮ ಮತ, ನಮ್ಮ ಹಿತ



ಪ್ರಜಾಪ್ರಭುತ್ವ ಆಳ್ವಿಕೆ ಪದ್ಧತಿಯಲ್ಲಿ ಎಲ್ಲಕ್ಕಿಂತ ಮಿಗಿಲಾದ ದಾನವೆಂದರೆ ಮತದಾನ. ಇದು ಸಾತ್ವಿಕ ಮತ್ತು ರಾಜ್ಸಿಕ ಮಹಾದಾನವು ಹೌದು. ಇದು ನಮ್ಮ ಸಾಮಾಜಿಕ, ನೈತಿಕ, ಆಡಳಿತಾತ್ಮಕ ಕರ್ತವ್ಯವಾಗಿದೆ. ಸಂವಿಧಾನಬದ್ದವಾಗಿ ನಮಗೆ ನೀಡಿರುವ ಹಕ್ಕನ್ನು ಚಲಾಯಿಸುವುದು ನಮ್ಮ ಕರ್ತವ್ಯ. ಪ್ರಜಾಪ್ರಭುತ್ವದಲ್ಲಿ ಚುನಾವಣೆ ಮತ್ತು ಮತದಾನ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಮತದಾನವೆನ್ನುವುದು ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖವಾದ ಪ್ರಕ್ರಿಯೆಯಾಗಿದೆ. ಜನತೆಯು ಯಾವುದಾದರೂ ವಿಷಯ, ಅಥವಾ ಅಭ್ಯರ್ಥಿಗಳ ಬಗ್ಗೆ ತಮ್ಮ ನಿರ್ಣಯಗಳನ್ನು ಸೂಚಿಸಲು ಅನುವು ಮಾಡಿಕೊಡುವ ಒಂದು ಪ್ರಕ್ರಿಯೆಯೇ ಮತದಾನ. ಸರ್ಕಾರ ನಡೆಸಲು ಜನಪ್ರತಿನಿಧಿಗಳ ಆಯ್ಕೆಯನ್ನು ಚುನಾವಣೆಗಳ ಮುಖಾಂತರ ನಡೆಸಲಾಗುತ್ತದೆ. ಈ ಚುನಾವಣೆಗಳಲ್ಲಿ ಮತದಾನ ಮಾಡುವುದು ಪ್ರತಿಯೊಬ್ಬ ವಯಸ್ಕ ಪ್ರಜೆಗಳ ಹಕ್ಕು ಮತ್ತು ಕರ್ತವ್ಯವಾಗಿರುತ್ತದೆ. ಭಾರತದಲ್ಲಿ ಹದಿನೆಂಟು ಅಥವಾ ಹದಿನೆಂಟಕ್ಕು ಹೆಚ್ಚಿನ ವಯಸ್ಸಿನ ಪ್ರಜೆಗಳು ಮತದಾನ ಮಾಡಬಹುದು.

ಮತದಾನವನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಲಾಗುತ್ತದೆ. ನೇರ ಮತದಾನ, ವಿರೋಧ ಮತದಾನ, ಅಧಿಕೃತ ಪ್ರತಿನಿಧಿ ಮತದಾನ, ನೋಟಾ ಮತದಾನ. ಮತದಾನದ ಸಮಯದಲ್ಲಿ ಪಕ್ಷಪಾತ ನಡೆಯಲು ಅವಕಾಶ ನೀಡಬಾರದು. ಜಾತಿ, ಧರ್ಮ, ಹಣ, ಅಂತಸ್ತು ಇವುಗಳನ್ನು ಬಿಟ್ಟು ಅಭ್ಯರ್ಥಿಯ ಸಾಮರ್ಥ್ಯ, ತಿಳುವಳಿಕೆ, ಆಡಳಿತಾತ್ಮಕ ಅನುಭವ,ವರ್ಚಸ್ಸು, ವಯಸ್ಸು ಮತ್ತು ವಿದ್ಯೆಯನ್ನು ಗಮನದಲ್ಲಿಟ್ಟುಕೊಂಡು ಮತದಾನ ಮಾಡಬೇಕು. ನಾವು ಆಯ್ಕೆ ಮಾಡುವ ಪ್ರತಿನಿಧಿ ಸಮರ್ಥವಾಗಿದ್ದರೆ, ನಾವು ಸುರಕ್ಷಿತವಾಗಿರುತ್ತೇವೆ ಎಂಬುದನ್ನು ಮರೆಯಬಾರದು.

ಭಾರತದಲ್ಲಿ ಚುನಾವಣೆ ನಡೆಸಲು ಚುನಾವಣಾ ಆಯೋಗವಿದೆ. ಇದು ನಿಷ್ಪಕ್ಷಪಾತವಾಗಿ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆಗಳು ನಡೆಯುತ್ತವೆ. ಚುನಾವಣೆಯಲ್ಲಿ ಬಹುಮತ ಪಡೆದವರು ಆಡಳಿತ ಪಕ್ಷವಾಗಿ ಸರಕಾರವನ್ನು ರಚಿಸುತ್ತಾರೆ. ಆಡಳಿತ ಪಕ್ಷದವರನ್ನು ಮತದಾನದ ಮೂಲಕ ಆಯ್ಕೆ ಮಾಡುವುದು ಪ್ರಜೆಗಳ ಹಕ್ಕು ಮಾತ್ರವಲ್ಲದೇ ನಮ್ಮ ರಾಷ್ಟ್ರ



ಮತ್ತು ನಾವು ಅನುಸರಿಸುವ ಪ್ರಜಾಪ್ರಭುತ್ವದ ತತ್ವಗಳನ್ನು ಬಲಪಡಿಸುವ ಕರ್ತವ್ಯ ಕೂಡ. ಪ್ರತಿಯೊಂದು ಮತವು ಗಣರಾಜ್ಯದ ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವಕ್ಕೆ ಕೊಡುಗೆಯನ್ನು ನೀಡುತ್ತದೆ. ಪ್ರತಿಯೊಬ್ಬ ಪ್ರಜೆಯು ತಮ್ಮ ಮತದಾನದ ಹಕ್ಕನ್ನು ಶ್ರದ್ಧೆಯಿಂದ ಚಲಾಯಿಸಬೇಕು. ಜವಾಬ್ದಾರಿಯುತ ನಾಗರಿಕರಾಗಲು ಬಯಸಿದರೆ, ಚುನಾವಣೆಯ ಸಮಯದಲ್ಲಿ ನಿಮ್ಮ ಮತವನ್ನು ಚಲಾಯಿಸುವುದರ ಮೂಲಕ ನಿಮ್ಮ ಕರ್ತವ್ಯಪರತೆಯನ್ನು ತೋರಿಸಬೇಕು. ಈ ಮತದಾನವು ಸರ್ಕಾರದಲ್ಲಿ ನಮ್ಮ ಧ್ವನಿಯಾಗಿರುವ ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯಾಗಿದೆ.

ಸರ್ಕಾರಗಳು ನಾವು ನೀಡುವ ಮತಗಳ ಮೂಲಕ ರಚನೆಯಾಗುತ್ತವೆ. ಮುಂದಿನ ಸರ್ಕಾರವನ್ನು ಯಾರು ರಚಿಸಬೇಕೆಂದು ಜನರು ಮತಗಳ ಮೂಲಕ ನಿರ್ಧರಿಸುತ್ತಾರೆ. ಚುನಾವಣೆಯ ಸಮಯದಲ್ಲಿ, ಜನರು ಚಲಾಯಿಸುವ ಪ್ರತಿಯೊಂದು ಮತವೂ ಮುಖ್ಯವಾಗಿದೆ, ಆದ್ದರಿಂದ ಜನರು ತಮ್ಮ ಮತಗಳನ್ನು ಚಲಾಯಿಸುವ ಜವಾಬ್ದಾರಿಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನಮ್ಮ ಮತ ನಮ್ಮ ಧ್ವನಿಯಾಗಬೇಕು. ಮತದಾನದ ಮೂಲಕ ಜಗತ್ತನ್ನು ಬದಲಾಯಿಸುವುದು ನಮ್ಮ ಕೈಯಲ್ಲಿದೆ. ಮತದಾನ ಮಾಡುವುದು ನಮ್ಮ ಜವಾಬ್ದಾರಿ ಮತ್ತು ಹಕ್ಕು. ನಮ್ಮ ಪ್ರತಿಯೊಂದು ಮತವೂ ಗಣನೆಗೆ ಬರುತ್ತದೆ. ಬುಲೆಟ್ ಬಳಸುವ ಬದಲು ಬ್ಯಾಲೆಟ್ ಬಳಸೋಣ. ನಮ್ಮ ಮತವು ಖಂಡಿತವಾಗಿ ಪರಿಸ್ಥಿತಿಯನ್ನು ಬದಲಾಯಿಸುತ್ತದೆ. ನಮ್ಮ ಹೆಣ್ಣು ಮಕ್ಕಳ ಮಾನ, ಗಂಡು ಮಕ್ಕಳ ಪ್ರಾಣವುಳಿಯಬೇಕಾದರೆ, ನಮ್ಮ ಮುಂದಿನ ಪೀಳಿಗೆಗಳು ಸುರಕ್ಷಿತವಾಗಿ ಬದುಕಬೇಕೆಂದರೆ, ತಪ್ಪದೇ ಮತದಾನ ಮಾಡಬೇಕು. ಸಮರ್ಥ ನಾಯಕನಿಗೆ ಆಡಳಿತದ ಚುಕ್ಕಾಣಿಯನ್ನು ನೀಡಬೇಕು. ನಮ್ಮ ಸುಂದರ ನಾಳೆಯನ್ನು ನಾವೇ ಮತದಾನ ಮಾಡುವ ಮೂಲಕ ಆಯ್ಕೆ ಮಾಡಬೇಕು. ಮತದಾರನಿಗೆ ಮಾತ್ರ ಆಡಳಿತ ಸರಕಾರವನ್ನು ತರಲು ಅಥವಾ ಸರಕಾರವನ್ನು ಬೀಳಿಸಲು ಅಧಿಕಾರವಿದೆ ಎಂಬುದನ್ನು ತಿಳಿದುಕೊಂಡು ಮರೆಯದೇ ಮತದಾನ ಮಾಡಬೇಕು. ಮುಂದಿನ ದಿನಗಳಲ್ಲಿ ನೆಮ್ಮದಿಯಿಂದ ಜೀವನ ಮಾಡಬೇಕೆಂದಾದರೆ ಬುದ್ಧಿವಂತಿಕೆಯಿಂದ ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಬೇಕು. ಒಂದು ತಪ್ಪು ಆಯ್ಕೆಗೆ ಮುಂದಿನ ಐದು ವರ್ಷಗಳವರೆಗೆ ಸಂಕಷ್ಟ ಅನುಭವಿಸಬೇಕು. ಮತಗಟ್ಟೆ ದೂರವಿದೆ ಅಥವಾ ಬೇರೆ ಊರಿಗೆ ಹೋಗಬೇಕು ಎಂಬ ನೆಪ ಬೇಡ. ಮತದಾನದ ದಿನ ಸಾರ್ವತ್ರಿಕ ರಜೆಯಿರುತ್ತದೆ. ಯಾವ ಕಾರಣಕ್ಕಾಗಿ ರಜೆ ನೀಡಿದ್ದಾರೆಂಬುದನ್ನು ಅರಿತು, ಮತ ಚಲಾಯಿಸುವ ಮೂಲಕ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಿ. ಏನೆಲ್ಲಾ ಸವಲತ್ತುಗಳನ್ನು ನೀಡಿದರೂ ನಗರ ಪ್ರದೇಶಗಳಲ್ಲಿ ಮತದಾನದ ಶೇಕಡಾವಾರು ಕಡಿಮೆಯಿರುತ್ತದೆ. ಕಾರಣ ನಗರದಲ್ಲಿ ವಾಸಿಸುವ ಬಹುತೇಕರು ಉದ್ಯೋಗ/ ವ್ಯಾಪಾರ ನಿಮಿತ್ತ ಪಟ್ಟಣಕ್ಕೆ ಬಂದಿರುತ್ತಾರೆ. ಆದರೆ ಅವರ ಮತ ಚಲಾಯಿಸುವ ಹಕ್ಕನ್ನು ಅವರ ಹುಟ್ಟೂರಿನ ಮತಗಟ್ಟೆಯಲ್ಲೇ ಬಿಟ್ಟು ಬಂದಿರುತ್ತಾರೆ. ಆರ್ಥಿಕ ಕಾರಣ, ಸಮಯದ ಅಭಾವ, ಆರೋಗ್ಯದ ಸಮಸ್ಯೆ ಅಥವಾ ಮತ್ತ್ಯಾವುದೋ ಕಾರಣದಿಂದಾಗಿ ಅವರು ಮತ ಚಲಾಯಿಸದೇ ಚುನಾವಣಾ ಪ್ರಕ್ರಿಯೆಯಿಂದ ಹೊರಗಡೆಯೇ ಉಳಿದು ಬಿಡುತ್ತಾರೆ. ಹೀಗಾಗದಂತೆ ಚುನಾವಣಾ ಆಯೋಗ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು. ಮತಗಟ್ಟಗೆ ಹೋಗಲು ಅಶಕ್ತರಾದವರಿಗೆ ಆನ್ಲೈನ್ ಮೂಲಕ ಮತದಾನ ಮಾಡಲು ಅವಕಾಶ ಮಾಡಿಕೊಡಬೇಕು. ಆಧಾರ ಕಾರ್ಡ್ ಹೊಂದಿದ, ಹದಿನೆಂಟು ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯ ಮತದಾನ ನಿಯಮವನ್ನು ಜಾರಿಗೆ ತರಬೇಕು. ಮತದಾನ ಮಾಡಲು ಅವರಿಗೆ ಅನುಕೂಲಕರ ವ್ಯವಸ್ಥೆ ಮಾಡಬೇಕು. ಆದಾಗ್ಯೂ ಒಂದೊಮ್ಮೆ ಅವರು ಮತ ಚಲಾಯಿಸದಿದ್ದರೆ ಅಂತವರಿಗೆ ದಂಡವನ್ನು ಹಾಕಬೇಕು. ಅವರ ಆಧಾರ್ ಕಾರ್ಡ್ ಮತ್ತು ವಾಹನ ಚಾಲನೆ ಪರವಾನಗಿಯನ್ನು ರದ್ದುಪಡಿಸಬೇಕು. ಅವರು ಎಷ್ಟು ಬಾರಿ ಮತದಾನ ಮಾಡಿದ್ದಾರೆ ಅಥವಾ ಮಾಡಿಲ್ಲವೆಂಬುದನ್ನು ಈ ಆಧಾರ ಕಾರ್ಡ್ನಲ್ಲಿ ನಮೂದಿಸುವ ವ್ಯವಸ್ಥೆ ತರಬೇಕು. ಜನರಲ್ಲಿ ಮತದಾನದ ಅರಿವಿನೊಂದಿಗೆ, ಜಾಗೃತಿ ಕೂಡ ಇರಬೇಕು. ಒಂದೊಮ್ಮೆ ಹಕ್ಕನ್ನು ಚಲಾಯಿಸದಿದ್ದರೆ, ನೇರವಾಗಿ ದಂಡನೆಗೆ ಒಳಗಾಗುತ್ತೇವೆಂಬ ಭಯ ಕೂಡ ಇರಬೇಕು. ಆಗಲೇ ನಮ್ಮ ಜನ ಮತಗಟ್ಟೆಯ ಬಳಿ ಹೋಗುತ್ತಾರೆ. ಹಾಗಾಗಿಯೇ ಹಿಂದಿನ ಕಾಲದಲ್ಲಿ



ತ್ರೈಲೋಕಗಳಲ್ಲೂ ದಾನಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲವೆಂದು ಸೌರಪುರಾಣದಲ್ಲಿ ಉಲ್ಲೇಖಿಸಲಾಗಿದೆ. ದಾನವೆಂದರೆ ಉಡುಗೊರೆ ಅಥವಾ ಕೊಡುಗೆ ಎಂದು ಅನಾದಿಕಾಲದಿಂದಲೂ ತಿಳಿದಿರುವ ಸಂಗತಿಯಾಗಿದೆ. ಕರ್ಮ ಸಿದ್ದಾಂತವನ್ನು ನಂಬಿರುವ ಹಿಂದೂ ಧರ್ಮಿಯರಲ್ಲಿ ದಾನ ಕಾರ್ಯಗಳನ್ನು ಮಾಡುವುದು ಜೀವನದ ಅವಿಭಾಜ್ಯವಾಗಿತ್ತು. ಹಳೆಯ ಕಾಲದ ದಾನಗಳಲ್ಲಿ ಸಾತ್ವಿಕ, ರಾಜ್ಸಿಕ ಮತ್ತು ತಾಮ್ಸಿಕ ದಾನಗಳು ಪ್ರಮುಖವಾಗಿದ್ದವು. ಸಾತ್ವಿಕ ದಾನ ಒಂದು ರೀತಿಯ ದತ್ತಿಯಾಗಿದ್ದು, ಭವಿಷ್ಯದಲ್ಲಿ ಆ ಕಾರ್ಯಕ್ಕಾಗಿ ಮರುಪಾವತಿಯನ್ನು ಪಡೆಯುವ ಯಾವುದೇ ನಿರೀಕ್ಷೆಯಿಲ್ಲದೆ ಸಾಮಾಜಿಕ ಕಾರಣಕ್ಕಾಗಿ ಕೊಡುಗೆ ನೀಡಲು ನಡೆಸಲಾಗುತ್ತದೆ. ರಾಜ್ಸಿಕ ದಾನವೆಂದರೆ, ಭವಿಷ್ಯದಲ್ಲಿ ಕೆಲವು ಸಂಭವನೀಯ ಲಾಭವನ್ನು ಪಡೆಯಲು ಮಾಡುವ ದಾನ. ತಾಮ್ಸಿಕ ದಾನವೆಂದರೆ ಯಾರನ್ನಾದರೂ ಅವಮಾನಿಸಲು ನೀಡುವ ದಾನವಾಗಿದೆ. ದಾನವನ್ನು ಕೊಡುವುದರಿಂದ ಸ್ವರ್ಗ ದೊರೆಯುತ್ತದೆ. ಸಾರ್ವಭೌಮತ್ವ, ಶಾಂತಿ, ಸೌಂದರ್ಯ, ತೇಜಸ್ಸು, ಕೀರ್ತಿ, ಚೈತನ್ಯ, ವಿಜಯ, ಶಕ್ತಿ ಮತ್ತು ಮುಕ್ತಿಗಳನ್ನು ಪಡೆಯಬಹುದು ಎಂಬ ನಂಬಿಕೆಯನ್ನು ಹೊಂದಿದ್ದರು. ದಾನದಿಂದ ಒಬ್ಬನು ತನ್ನ ಶತ್ರುವನ್ನು ಗೆಲ್ಲಬಹುದು, ಅಂಟಿರುವ ರೋಗವನ್ನು ನಾಶಮಾಡಬಹುದು, ಜ್ಞಾನ ಮತ್ತು ಸಂಗಾತಿಯನ್ನು ಸಂಪಾದಿಸಬಹುದು ಎಂದು ತಿಳಿಯಲಾಗಿತ್ತು. ದಾನವು ಧರ್ಮ , ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಪಡೆಯುವ ಅತ್ಯುತ್ತಮ ಸಾಧನಗಳಲ್ಲಿ ಒಂದೆಂದು ಪುರಾಣದಲ್ಲಿ ತಿಳಿಸಲಾಗಿದೆ. ದಾನ ಕಾರ್ಯವನ್ನು ಧಾರ್ಮಿಕ, ನೈತಿಕ ಮತ್ತು ಪವಿತ್ರ ಕರ್ತವ್ಯವೆಂದು ಪರಿಗಣಿಸಲಾಗಿದೆ. ನಾವು ಈ ಜನ್ಮದಲ್ಲಿ ದಾನ ಕೊಟ್ಟದ್ದನ್ನು ಮುಂದಿನ ಜನ್ಮದಲ್ಲಿ ಅನುಭವಿಸುವಂತೆ ಭಗವಂತನು ಅನುಗ್ರಹ ಮಾಡುತ್ತಾನೆ ಎಂದು ಪರಮೇಶ್ವರನು ದೇವಿ ಪಾರ್ವತಿಗೆ ಹೇಳಿರುವುದನ್ನು ಪುರಾಣಗಳು ತಿಳಿಸುತ್ತವೆ.

ಈಗ ಹಿಂದಿನ ಕಾಲದ ದಾನದಂತೆ ಮತದಾನವು ಕೂಡ ನೈತಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ ಕರ್ತವ್ಯವೆಂದು ಪ್ರತಿಯೊಬ್ಬರೂ ಅರಿತು ತಪ್ಪದೇ ಮತದಾನ ಮಾಡೋಣವೇ..!!



ಲತಾ ಕೆ.ಎಸ್.ಹೆಗಡೆ
ಬೆಂಗಳೂರು

# ನಗರದಲ್ಲಿ ಮಹರ್ಷಿ ವಿಠ್ಠಲ ರಾಮಜಿ ಶಿಂಧೆ ಜಯಂತಿ ಆಚರಣೆ



**ಜಮಖಂಡಿ :** ನಗರದ ಛತ್ರಪತಿ ಶಿವಾಜಿ ವೃತ್ತದಲ್ಲಿ ಕರ್ಮವೀರ ಮಹರ್ಷಿ ವಿಠ್ಠಲ ರಾಮಜಿ ಶಿಂಧೆ ಅವರ ಜಯಂತಿ ಕಾರ್ಯಕ್ರಮದಲ್ಲಿ ಮಹರ್ಷಿ ವಿಠ್ಠಲ ರಾಮಜಿ ಶಿಂಧೆ ಪ್ರತಿಷ್ಠಾನದ ಅಧ್ಯಕ್ಷ ತಾತಾಸಾಹೇಬ ಬಾಂಗಿ ನೇತೃತ್ವದಲ್ಲಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಪ್ರತಿಷ್ಠಾನ ಉಪಾಧ್ಯಕ್ಷ ಎ.ಆರ್.ಶಿಂಧೆ, ಕಾರ್ಯದರ್ಶಿ ಸುನೀಲ ಶಿಂಧೆ, ಶರದ ಜಾಧವ, ಸುಭಾಷ ಕಾಶೀದ, ಅಜೀತ ಮೆಂಗಾಣಿ, ಮೋಹನ ಸಾವಂತ, ಬಸವರಾಜ ಬಳಗಾರ, ಬಂದೇನಮಾಜ್ ಕೊಡತಿ, ಸಚೀನ ಶಿಂಧೆ ಸಹಿತ ಹಲವರು ಇದ್ದರು.

# ಬಿಸನಾಳ ತೋಟದಲ್ಲಿ ಬನ್ನೆಮ್ಮದೇವಿ ಜಾತ್ರೆ ಸಂಭ್ರಮ

**ಮಹಾಲಿಂಗಪುರ :** ಸಮೀಪದ ಬಿಸನಾಳ ತೋಟದಲ್ಲಿ ಜೈಆಂಜನೇಯ ಹಾಗೂ ಬನ್ನೆಮ್ಮದೇವಿ ಸೇವಾ ಸನ್ನಿಧಿ ವತಿಯಿಂದ ಹನುಮ ಜಯಂತಿ, ಬನ್ನೆಮ್ಮದೇವಿ ಜಾತ್ರೆ ಅಂಗವಾಗಿ ತುತುಜ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು.

ಬೆಳಿಗ್ಗೆ ಸುಕ್ಷೇತ್ರ ಯಡೂರಿನ ಮಹಾಲಿಂಗ ಗುರುಸ್ವಾಮಿಗಳಿಂದ ನವಗ್ರಹ ಹಾಗೂ ಪವಮಾನ ಹೋಮ-ಹವನ ಜರುಗಿತು.ನಂತರ ಬನ್ನೆಮ್ಮದೇವಿ ದೇವಸ್ಥಾನದಿಂದ ಸಮೀರವಾಡಿ ಮಾರ್ಗವಾಗಿ ಮುತ್ತೈದೆಯರಿಂದ ಕುಂಭಮೇಳ, ಪಲ್ಲಕ್ಕಿಉತ್ಸವ, ಸಕಲ ವಾದ್ಯದೊಂದಿಗೆ ಶೋಭಾಯಾತ್ರೆ ನಡೆಯಿತು.



ಸಮೀರವಾಡಿಯ ಅಯ್ಯಪ್ಪ ಸನ್ನಿಧಿಯ ಈರಯ್ಯ ಸ್ವಾಮಿಗಳು ಹಾಗೂ ಶಿವಯ್ಯ ಮಠಪತಿ ಅವರಿಂದ ಕೆಸರಗೊಪ್ಪದ ಸುಭಾಸ ಮಠದ, ರುದ್ರಾಭಿಷೇಕ ನೆರವೇರಿತು. ಹನುಮ ಜಯಂತಿ ಅಂಗವಾಗಿ ನೂರಾರು ಭಕ್ತರ ಸಮ್ಮುಖದಲ್ಲಿ ಆಂಜನೇಯನ ನಾಮಕರಣ, ತೊಟ್ಟಿಲುಕಾರ್ಯಕ್ರಮ ಸಂಭ್ರಮದಿಂದ ನಡೆಯಿತು. ಮಧ್ಯಾಹ್ನ ಸದಾಶಿವ ರಗಟಿ ಅಯ್ಯಪ್ಪ ಸ್ವಾಮಿಗಳಿಂದ ಅಗ್ನಿಪೂಜೆ ಹಾಗೂ ಶಿವಲಿಂಗ ಗುರುಸ್ವಾಮಿಗಳಿಂದ ಅಗ್ನಿ ಪ್ರವೇಶಕಾರ್ಯಕ್ರಮ ನೆರವೇರಿತು.

ಜಾತ್ರೆ ಅಂಗವಾಗಿ ಬಿಸನಾಳದ ಅರ್ಜುನ ದೇಶನೂರ ಹಾಗು ಸಂಗಡಿಗರಿಂದ ಭಜನಾ ಕಾರ್ಯಕ್ರಮ ನಡೆಯಿತು.ಮುಖಂಡರಾದ ರಾಯಪ್ಪ ಕುರನಿಂಗ, ಬಸಪ್ಪ ವಾಲಿ, ಚಂದ್ರು ಸಂಶಿ, ಗಿರೀಶ ವಾಲಿ, ಅಶೋಕ ಸಂಶಿ, ನಿಂಗಪ್ಪ ಕುರನಿಂಗ, ಕಲ್ಲಪ್ಪ ಮಲ್ಕಾಪುರ, ಬಸವರಾಜ ಮಾನೋಜಿ, ಸಂತೋಷ ಮುಳ್ಳೂರ, ಯಮನಪ್ಪ ದಡ್ಡಿಮನಿ ಸೇರಿದಂತೆ ಹಲವರು ಇದ್ದರು.

# ವಿದ್ಯಾರ್ಥಿಗಳು ಉತ್ತಮ ಆರೋಗ್ಯ ಒಳ್ಳೆಯ ಹವ್ಯಾಸ ಬೆಳಸಿಕೊಳ್ಳಿ

**ಜಮಖಂಡಿ :** ವಿದ್ಯಾರ್ಥಿಗಳು ಉತ್ತಮ ಆರೋಗ್ಯ ಕಾಪಾಡಿಕೊಂಡು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಯುವಕರು ನಮ್ಮ ದೇಶದ ಅಮೂಲ್ಯ ಸಂಪತ್ತು. ದೇಶದ ಅಭಿವೃದ್ಧಿಗೆ ಯುವ ಸಂಪತ್ತು ಅಗತ್ಯವಾಗಿದೆ ಎಂದು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹಿರಿಯ ವೈದ್ಯಾಧಿಕಾರಿ ಡಾ.ಮಹೇಶ ಸತ್ತಿಗೇರಿ ಹೇಳಿದರು. ನಗರದ ಬಾಗಲಕೋಟೆ ವಿಶ್ವವಿದ್ಯಾಲಯದಲ್ಲಿ ವಿಶ್ವ ಆರ್ರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮವಾದ ಆರೋಗ್ಯ ಪಡೆಯಲು ಶುದ್ಧವಾದ



ನೀರು, ಉತ್ತಮ ಆಹಾರ, ವ್ಯಾಯಾಮ ಜೊತೆಗೆ ಒತ್ತಡರಹಿತ ಜೀವನ ಕ್ರಮವನ್ನು ಅಳವಡಿಸಿಕೊಳ್ಳಬೇಕು. ಆಹಾರದಲ್ಲಿ ಸಾವಯವ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕು ಫಾಸ್ಟ್ ಫುಡ್ಸ್ ವಿಸುವುದನ್ನು ಕಡಿಮೆಗೊಳಿಸಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕುಲಪತಿ ಆನಂದ ದೇಶಪಾಂಡೆ ಮಾತನಾಡಿ, ಇಂದಿನ ದಿನದಲ್ಲಿ ವಿದ್ಯಾರ್ಥಿಗಳು ಸಾಕಷ್ಟು ಒತ್ತಡ ಅನುಭವಿಸುತ್ತಿದ್ದು ಒತ್ತಡ ರಹಿತ ಜೀವನಕ್ಕೆ ಹೆಚ್ಚು ಆಧ್ಯತೆ ನೀಡಬೇಕು. ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು. ಮಾನಸಿಕ ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸಬೇಕು ಎಂದರು.

ವೇದಿಕೆಯಲ್ಲಿ ಕುಲಸಚಿವ ಪ್ರೊ.ಷಣ್ಮುಖಪ್ಪ ಅಂಗಡಿ, ಹಣಕಾಸು ಅಧಿಕಾರಿ ಡಾ.ಮಲ್ಲಿಕಾರ್ಜುನ ಮರಡಿ, ಡಾ. ಉಪಕುಲಸಚಿವೆ ರಾಜೇಶ್ವರಿ ಮಠದ, ಉಪನ್ಯಾಸಕರಾದ ಚೈತ್ರ ಕೋಹಳ್ಳಿ, ಶ್ರವಣಕುಮಾರ ಚಲವಾದಿ ಇದ್ದರು.


# ತಾಲೂಕಿನಲ್ಲಿ ಸಂಭ್ರಮದಿಂದ ಹನುಮ ಜಯಂತಿ ಆಚರಣೆ



**ಜಮಖಂಡಿ :** ನಗರಪ್ರದೇಶ ಮತ್ತು ಗ್ರಾಮೀಣಪ್ರದೇಶಗಳಲ್ಲಿ ಹೋಮಹವನ, ಚಾಲೀಸ್ ಮಂತ್ರ ಪಠಣದೊಂದಿಗೆ ಜಮಖಂಡಿ, ಹುಲ್ಯಾಳ, ಕುಂಚನೂರ, ಹುನ್ನೂರ, ಕಡಪಟ್ಟಿ, ಆಲಗೂರ ಸಹಿತ ವಿವಿಧ ಪ್ರದೇಶಗಳಲ್ಲಿ ಸಾವಿರಾರು ಭಕ್ತರು ಸಂಭ್ರಮ ಸೆಡಗರದಿಂದ ಹನುಮ ಜಯಂತಿಯನ್ನು ಆಚರಿಸಿದರು.

ನಗರದ ಲಕ್ಕನಕೆರೆ ರಸ್ತೆಯಲ್ಲಿರುವ ಹನುಮಾನ ದೇವಸ್ಥಾನದಲ್ಲಿ ಹನುಮ ಜಯಂತಿ ನಿಮಿತ್ತ ತಳಿರು ತೋರಣ, ಹೂವುಗಳಿಂದ ಶೃಂಗರಿಸಲಾಗಿತ್ತು. ಮಹಿಳೆಯರು ಸಾಮೂಹಿಕವಾಗಿ ತೊಟ್ಟಿಲುತೂಗಿ ನಾಮಕರಣ ಕಾರ್ಯ ಕ್ರಮವನ್ನು ನೆರವೆರಿಸಿದರು. ನಂತರ ಭಕ್ತರಿಗಾಗಿ ಅನ್ನ ಪ್ರಸಾದ ವಿತರಣೆ ನಡೆಯಿತು. ಬೆಳಗ್ಗೆಯಿಂದ ತಡರಾತ್ರಿವರೆಗೆ ಭಕ್ತರು ಹನುಮಾನ ದೇವಸ್ಥಾನಕ್ಕೆ ಆಗಮಿಸಿ ಎಣ್ಣೆ, ಕರ್ಪೂರ, ತುಳಸಿಮಾಲೆ, ತೆಂಗಿನಕಾಯಿ, ಸಿಹಿಪ್ರಸಾದ ನೀಡಿ, ಹನುಮಾನ ಚಾಲೀಸ್ ಪಠಿಸಿ ಭಕ್ತಿಯಿಂದ ಹನುಮ ಜಯಂತಿ ಆಚರಿಸಿದರು.

# ವಿಶ್ವದಲ್ಲಿ ಭಾರತ ದೇಶದ ಶಕ್ತಿ ಹೆಚ್ಚಾಗಿದೆ: ಪಿ.ಸಿ. ಗದ್ದಿಗೌಡರ



**ಜಮಖಂಡಿ :** ಪ್ರಧಾನಿ ನರೇಂದ್ರ ಮೋದಿಯವರ 10 ವರ್ಷದ ಆಡಳಿತ ಅವಧಿಯಲ್ಲಿ ವಿಶ್ವದಲ್ಲಿ ಭಾರತ ಶಕ್ತಿ ಮತ್ತು ದೇಶದಲ್ಲಿ ಸುರಕ್ಷತೆಗೆ ಹೆಚ್ಚಿನ ಆಧ್ಯತೆ ನೀಡಿದ್ದಾರೆಂದು ಲೋಕಸಭಾ ಚುನಾವಣೆ ಅಧ್ಯಕ್ಷ ಪಿ.ಸಿ.ಗದ್ದಿಗೌಡರ ಹೇಳಿದರು.

ನಗರದ ಎ.ಜಿ. ದೇಸಾಯಿ ವೃತ್ತದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಿಳೆಯರಿಗಾಗಿ ಸುರಕ್ಷಿತ ಮಾತೃತ್ವ ಅಭಿಯಾನ, ಉಜ್ವಲಾ ಯೋಜನೆ, ಬೇಟಿ ಬಚಾವೋ ಬೇಟಿ ಪಡಾವೋ, ಸುಕನ್ಯಾ ಸಮೃದ್ಧಿ ಯೋಜನೆ, ತ್ರಿವಳಿ ತಲಾಖ ನಿಷೇದ, ರೈತರಿಗಾಗಿ ಕಿಸಾನ ಸಮ್ಮಾನ ಯೋಜನೆ, ಬೆಳೆಗಳನ್ನು ಮಾರುಕಟ್ಟೆಗೆ ಸಾಗಿಸಲು ಕಿಸಾನ ರೈಲು ಯೋಜನೆ, ಹಾಗೂ ಧಾರ್ಮಿಕತೆಯ ಪುನರುತ್ಥಾನ, ಶಿಕ್ಷಣ, ಆರ್ಥಿಕತೆಯಲ್ಲಿ ಸಧೃಡತೆ, ಮೂಲಭೂತ ಸೌಕರ್ಯ, ರಕ್ಷಣಾ ಕ್ಷೇತ್ರದಲ್ಲಿ ಉನ್ನತಿಕರಣ ಸಹಿತ ಹತ್ತಾರು ದಿಟ್ಟ ನಿರ್ಧಾರ ಕೈಕೊಂಡು ಮಾಡಿದ ಸಾಧನೆಗಳು, ಸ್ಪಂದನೆ, ಸ್ವಾವಲಂಭನೆ, ಕೌಶಾಲ್ಯಾಭಿವೃದ್ಧಿ ಯೋಜನೆ ಮತ್ತು ಸಾವಿರಾರು ಸಮಾಜಮುಖಿ ಕಾರ್ಯಕ್ರಮಗಳಿಂದ ಸಧೃಡ ರಾಷ್ಟ್ರವನ್ನು ನಿರ್ಮಿಸಿದ್ದಾರೆ. ಕಾರಣ ಎಲ್ಲರೂ ಮತ್ತೋಮ್ಮೆ ಬಿಜೆಪಿ ಆರಿಸಿ ತರುವ ಮೂಲಕ ಭಾರತದ ಭವಿಷ್ಯ ರೂಪಿಸೋಣ ಎಂದರು.

ಇದೇ ಸಂದರ್ಭದಲ್ಲಿ ಶಾಸಕ ಜಗದೀಶ ಗುಡಗುಂಟಿ, ಮಾಜಿಶಾಸಕ ಶ್ರೀಕಾಂತ ಕುಲಕರ್ಣಿ, ವಿಧಾನ ಪರಿಷತ್ ಮಾಜಿಸದಸ್ಯ ಜಿ.ಎಸ್. ನ್ಯಾಮಗೌಡ, ಡಾ.ಉಮೇಶ ಮಹಾಬಳಶೆಟ್ಟಿ, ಡಾ.ವಿಜಯಲಕ್ಷ್ಮೀ ತುಂಗಳ, ಡಾ.ರಂಗನಾಥ ಸೋಲವಾಲ್ಕರ ಇದ್ದರು.

## ಲಕ್ಷ್ಮೀಬಾಯಿ ಬಸವರಾಜ ಬಿಜಾಪೂರ ನಿಧನ



**ಜಮಖಂಡಿ :** ನಗರದ ಕೋಷ್ಠಿಗಲ್ಲಿಯ ನಿವಾಸಿ ಲಕ್ಷ್ಮೀಬಾಯಿ ಬಸವರಾಜ ಬಿಜಾಪೂರ (59) ನಿಧನರಾದರು. ಮೃತರು ಇಬ್ಬರು ಪುತ್ರರು ಸೇ- ರಿದಂತೆ ಅಪಾರ ಬಂಧು- ಬಳಗದವರು ಅಗಲಿದ್ದಾರೆ.

# ಮಾರ್ಗಸೂಚಿ ಅನುಸಾರ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಿ: ಪವನ ಕುಮಾರ್ ಮಾಲಪಾಟಿ

**ಕೊಪ್ಪಳ :** ನರೇಗಾ ಯೋಜನೆಯ ಮಾರ್ಗಸೂಚಿಯನುಸಾರ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಹಾಗೂ ವಿಳಂಬ ಮಾಡದೆ ಅನುಷ್ಠಾನಗೊಳಿಸಿ ಎಂದು ಗ್ರಾಮೀಣಾಭಿವೃದ್ಧಿ ಆಯುಕ್ತರಾದ ಪವನ ಕುಮಾರ ಮಾಲಪಾಟಿ ಅವರು ತಿಳಿಸಿದರು.

ಶನಿವಾರದಂದು ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯೋಜನೆಯ ಮಾರ್ಗಸೂಚಿ ನಿಯಮಾನುಸಾರ ಕಾಮಗಾರಿಗಳನ್ನು ವಿಳಂಬ ಮಾಡದೇ ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಿ ಎಂದು ತಿಳಿಸಿದ ಅವರು, ಪ್ರತ್ಯೇಕವಾಗಿ ತಾಲೂಕುವಾರು ಪ್ರಗತಿ ಪರಿಶೀಲನೆ ನಡೆಸಿ ಗುಣಮಟ್ಟದ ಕಾಮಗಾರಿಗಳು ಹಾಗೂ ಕಡತಗಳನ್ನು ಸರಿಯಾಗಿ ನಿರ್ವಹಿಸುವುದು, ಕಾಮಗಾರಿ ಸ್ಥಳದಲ್ಲಿ ಮಾಹಿತಿ ಫಲಕ ಕಡ್ಡಾಯವಾಗಿ ಅಳವಡಿಸುವುದು ಮತ್ತು ನರೇಗಾ ಯೋಜನೆಯ ಏಕೀಕೃತ ಸಹಾಯವಾಣಿ 8277506000 ಗೆ ದೂರು ಅಥವಾ ಕೆಲಸದ ಬೇಡಿಕೆಗಾಗಿ ಕರೆ ಮಾಡಬಹುದು. ಇದನ್ನು ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರಚುರಪಡಿಸಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಗ್ರಾಮ ಪಂಚಾಯತಿ ಮಟ್ಟದಲ್ಲಿ ಹಾಗೂ ಅನುಷ್ಠಾನ ಇಲಾಖೆಯಡಿ ಅನುಷ್ಠಾನಗೊಳ್ಳುವ ಕಾಮಗಾರಿಗಳ ಕಡತಗಳಲ್ಲಿ 21 ಅಂಶಗಳನ್ನು ಒಳಗೊಂಡ ಕಾಮಗಾರಿ ಕಡತಗಳನ್ನು ನಿರ್ವಹಿಸಬೇಕು. ಕಾಮಗಾರಿಗಳಲ್ಲಿ ಪ್ರತಿದಿನ 7 ವಹಿಗಳು(ಸೆವೆನ್ ರೆಜಿಸ್ಟರ್) ಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು ಹಾಗೂ ಸಂಬಂಧಿಸಿದ ಮೇಲಾಧಿಕಾರಿಗಳು ಭೇಟಿ ನೀಡಿದ ವೇಳೆ ವಹಿಗಳನ್ನು ಪ್ರಸ್ತುತಪಡಿಸಬೇಕು ಎಂದು ತಿಳಿಸಿದರು.

ಕಡಿಮೆ ಮಾನವ ದಿನಗಳನ್ನು ಸೃಜಿಸಿದ ಗ್ರಾಮ ಪಂಚಾಯತಿ ಹಾಗೂ ಅನುಷ್ಠಾನ ಇಲಾಖೆಗಳು ಮಾಸಿಕವಾರು ಮಾನವ ದಿನಗಳ ಪ್ರಗತಿ ಸಾಧಿಸುವಂತೆ ಸೂಚಿಸಿದರು. ಒಂದು ಕುಟುಂಬಕ್ಕೆ ಕಡ್ಡಾಯವಾಗಿ 100 ಮಾನವ ದಿನಗಳನ್ನು ಸೃಜಿಸುವಂತೆ ಕ್ರಮವಹಿಸಬೇಕು. ಗ್ರಾಮ ಪಂಚಾಯತಿಗಳು ಕೂಲಿಕಾರರಿಗೆ ಕೆಲಸದ ಕೊಡದ ಬಗ್ಗೆ ದೂರುಗಳು ಬರದಂತೆ ನೋಡಿಕೊಳ್ಳಲು ಸೂಚಿಸಿದರು.

ಈ ಸಂದರ್ಭದಲ್ಲಿ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೇಯ, ಜಂಟಿ ನಿರ್ದೇಶಕರು(ತೋಟಗಾರಿಕೆ) ಇಲಾಖೆ ಶ್ರೀಶೈಲ್ ದಿಡ್ಡಿಮನಿ, ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ಕೊಪ್ಪಳ ಮಲ್ಲಿಕಾರ್ಜುನ್ ತೊದಲಬಾಗಿ, ಸಹಾಯಕ ಸಹಾಯಕ ಕಾರ್ಯದರ್ಶಿಗಳಾದ ಶಿವಪ್ಪ ಸುಬೇದಾರ್, ಸಹಾಯಕ ನಿರ್ದೇಶಕರಾದ ತ್ಯಾಗರಾಜ್, ತಾಂತ್ರಿಕ ಇಂಜಿನಿಯರ್ ಯಶವಂತ್, ತೋಟಗಾರಿಕೆ ಉಪ ನಿರ್ದೇಶಕರು, ಯೋಜನಾ ಅಭಿಯಂತರರು, ತಾಪಂನ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಅನುಷ್ಠಾನ ಇಲಾಖೆ ಅಧಿಕಾರಿಗಳು,

ಜಿಪಂ, ತಾಪಂ ನರೇಗಾ ಸಿಬ್ಬಂದಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಎಡಿಪಿಸಿ ಮಹಾಂತಸ್ವಾಮಿ, ಮೈನುದ್ದಿನಿಲ್, ಡಿಐಇಸಿ ಶ್ರೀನಿವಾಸ್ ಚಿತ್ರಗಾರ್ ತಾಲೂಕ ಮಟ್ಟದ ತಾಂತ್ರಿಕ ಸಂಯೋಹಕರು, ತಾಂತ್ರಿಕ ಸಹಾಯಕರು ಹಾಜರಿದ್ದರು.

# ಮೂಡಲಗಿ ಬಸವೇಶ್ವರ ಸೊಸಾಯಿಟಿಗೆ 4.58 ಕೋಟಿ ಲಾಭ



**ಮೂಡಲಗಿ :** ನಗರದ ಪ್ರತಿಷ್ಠಿತ ಹಣಕಾಸು ಸಂಸ್ಥೆಗಳಲ್ಲಿ ಒಂದಾದ ಶ್ರೀ ಬಸವೇಶ್ವರ ಅರ್ಬನ್ ಕೋ-ಆಫ್.ಕ್ರೆಡಿಟ್ ಸೊಸಾಯಿಟಿಯು ಮಾರ್ಚ ಅಂತ್ಯಕ್ಕೆ 4.58. ಕೋಟಿ ಲಾಭಗಳಸಿ ಪ್ರಗತಿ ಪಥದತ್ತ ಸಾಗಿದೆ, ಪ್ರಸ್ತುತ ಸಾಲಿನಲ್ಲಿ 5 ನೂತನ ಶಾಖೆಗಳನ್ನು ಪ್ರಾರಂಭಿಸಲಾಗುವದು ಎಂದು ಬ್ಯಾಂಕಿನ ಅಧ್ಯಕ್ಷ ಮಲ್ಲಿಕಾರ್ಜುನ ಢವಳೇಶ್ವರ ತಿಳಿಸಿದ್ದಾರೆ.

ಬುಧವಾರ ಸಂಘದ ಸಭಾಭವನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಸಂಘವು ಮಾರ್ಚ ಅಂತ್ಯಕ್ಕೆ 6.07 ಕೋಟಿ ಶೇರು ಬಂಡವಾಳ, 20.2 ಕೋಟಿ ನಿಧಿಗಳನ್ನು ಹೊಂದಿ ಸಾರ್ವಜನಿಕ ವಲಯದಿಂದ 207 ಕೋಟಿ ರೂ. ಠೇವು ಸಂಗ್ರಹಿಸಿ, ತನ್ನ ಸದಸ್ಯರಿಗೆ 158 ಕೋಟಿ ರೂ. ವಿವಿಧ ರೀತಿಯ ಸಾಲ ವಿತರಿಸಿದೆ. ಠೇವಣಿ ಭದ್ರತೆಗಾಗಿ ರಾಷ್ಟ್ರೀಕೃತ ಬ್ಯಾಂಕಗಳಲ್ಲಿ 61.31 ಕೋಟಿ ರೂ. ಠೇವಣಿ ಇಡಲಾಗಿದೆ. ಮಾರ್ಚ ಅಂತ್ಯಕ್ಕೆ 244 ಕೋಟಿ ರೂ ದುಡಿಯುವ ಬಂಡವಾಳ ಹೊಂದಿದೆ ಎಂದರು,

ಈ ಸಾಲಿನಿಂದ ವಾಹನ, ಎಚ್,ಪಿ ಹಾಗೂ ಸಿ ಸಿ ಸಾಲಗಳ ಮೇಲಿನ ಬಡ್ಡಿದರವನ್ನು ಶೇ 1 ರಷ್ಟು ಕಡಿಮೆ ಮಾಡಲಾಗಿದ್ದು ಇದರಿಂದ ಸರ್ವ ಸದಸ್ಯರಿಗೆ ಅನುಕೂಲವಾಗಲಿದೆ, ಶೇರುದಾರರಿಗೆ ಶೇ 15ರಷ್ಟು ಲಾಭಾಂಶವನ್ನು ನೀಡಲಾಗುತ್ತಿದೆ ಎಂದರು,

1995-96 ರಲ್ಲಿ ಪ್ರಾರಂಭವಾದ ಈ ಸಂಸ್ಥೆಯ 15 ಶಾಖೆಗಳನ್ನು ಹೊಂದಿದ್ದು ಗುರ್ಲಾಪೂರ, ಹುಣಶ್ಯಾಳ ಪಿ ವಾಯ್, ಯಾದವಾಡ, ಯರಗಟ್ಟಿ, ನಾಗನೂರ, ವಡೇರಹಟ್ಟಿ, ಹಂದಿಗುಂದ, ಮುಗಳಖೋಡ, ಮುನವಳ್ಳಿ, ಅಥಣಿ, ಕಬ್ಬೂರ, ಗೋಕಾಕ, ಬೆಟಗೇರಿ, ಮುಧೋಳ ಹಾಗೂ ಮಹಾಲಿಂಗಪೂರ ಶಾಖೆಗಳು ಲಾಭ ಹೊಂದಿ ಪ್ರಗತಿಪಥದಲ್ಲಿ ಮುನ್ನುಗ್ಗುತ್ತಿವೆ. ಗ್ರಾಹಕರಿಗೆ ತ್ವರಿತ ಗತಿಯ ಸೇವೆ ಸಲ್ಲಿಸಲು ಸಂಸ್ಥೆಯ ಪ್ರಧಾನ ಕಛೇರಿಯುಲ್ಲಿ ಸಂಪೂರ್ಣ ಗಣಕೀಕೃತ ಸೇವೆಯನ್ನು ಅಳವಡಿಸಿಕೊಳ್ಳಲಾಗಿದೆ, ಎಂದು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಬಸವರಾಜ ಬಡಿಗೇರ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ರವೀಂದ್ರ ಭಾಗೋಜಿ, ನಿರ್ದೇಶಕರಾದ ಬಸವರಾಜ ತೇಲಿ, ಚನ್ನಬಸು ಬಡ್ಡಿ ಶ್ರೀಕಾಂತ ಹಿರೇಮಠ, ಗಿರೀಶ ಡವಳೇಶ್ವರ, ಶ್ರೀಶೈಲ ಯ ಮದಗಣ್ಣವರ, ದೇವಪ್ಪ ಕೌಜಲಗಿ, ಕುಸುಮಾ ತೇಲಿ, ಸುಮಿತ್ರಾ ಶೇಡಬಾಳ, ಮಹಾದೇವಿ ಹಿರೇಮಠ, ಲಕ್ಷ್ಮಣ ತೆಳಗಡೆ ಹಾಗೂ ರಾಘವೇಂದ್ರ ಕೆಸಪನಟಿ ಉಪಸ್ಥಿತರಿದ್ದರು.

# ಮತಗಟ್ಟೆಗಳಿಗೆ ಚುನಾವಣಾಧಿಕಾರಿ ಭೇಟಿ: ಮತದಾನ ಹೆಚ್ಚಿಸಲು ಸಾಕಷ್ಟು ಕ್ರಮ

**ತೇರದಾಳ :** ಲೋಕಸಭೆ ಚುನಾವಣೆ ಮತದಾನ ಹೆಚ್ಚಳಕ್ಕೆ ತೇರದಾಳ ಮತಕ್ಷೇತ್ರದಲ್ಲಿ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಸಾಜೀದ ಮುಲ್ಲಾ ತಿಳಿಸಿದರು.

ಪಟ್ಟಣದ ದೇವರಾಜ ನಗರದ ಸರಕಾರಿ ಎಚ್‌ಪಿಎಸ್ ಶಾಲೆಯಲ್ಲಿನ ಮತಗಟ್ಟೆ ಸಂಖ್ಯೆ 5ರಲ್ಲಿ ನಿರ್ಮಿಸಿದ ಯುವ ಮತಗಟ್ಟೆಯನ್ನು ವೀಕ್ಷಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದರು.



ಮತಕ್ಷೇತ್ರದಲ್ಲಿ ಐದು ಸಖಿ(ಪಿಂಕ್), ಯುವ, ವಿಶೇಷಚೇತನ ಸೇರಿದಂತೆ ಹಲವು ಬಗೆಯ ಮತಗಟ್ಟೆಗಳನ್ನು ನಿರ್ಮಿಸಲಾಗಿದೆ. ನಾಮಪತ್ರ ಹಿಂಪಡೆಯುವ ದಿನ ಮುಗಿದ ಬಳಿಕ 85 ವಯೋಮಾನದವರಿಗೆ ಮನೆಯಲ್ಲಿಯೇ ಮತದಾನ ನಡೆಯಲಿದೆ ಎಂದು ತಿಳಿಸಿದರು.

ಈಗಾಗಲೇ ಮತದಾರರ ಪಟ್ಟಿ ಪೂರ್ಣಗೊಂಡಿದ್ದು, ಮತಗಟ್ಟೆಗಳಲ್ಲಿ ನೀರು, ದೀಪ, ರ್‍ಯಾಂಪ್, ಶೌಚಾಲಯ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕೈಗೊಳ್ಳಲಾಗಿದೆ. ಕೆಲವು ಕಡೆಗಳಲ್ಲಿ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ತಹಸೀಲ್ದಾರ್ ಗಿರೀಶ ಸ್ವಾದಿ, ಗ್ರೇಡ್ 2 ತಹಸೀಲ್ದಾರ್ ಎಸ್.ಬಿ. ಕಾಂಬಳೆ, ಕಂದಾಯ ನಿರೀಕ್ಷಕ ಪಿ.ಎಸ್. ಮಠಪತಿ ಇದ್ದರು.

# ಮೇವು ಬ್ಯಾಂಕ ಸ್ಥಾಪನೆಗೆ ರೈತರ ಒತ್ತಾಯ

**ಮೂಡಲಗಿ :** ಕರ್ನಾಟಕ ರೈತರ ಹಿತರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಸುರೇಶ ನಾಯ್ಕ ನೇತೃತ್ವದಲ್ಲಿ ವೇದಿಕೆಯ ಸರ್ವ ಸದಸ್ಯರು ಇಂದು ಜಾನುವಾರಗಳಿಗೆ ಮೇವು ಬ್ಯಾಂಕ ಸ್ಥಾಪನೆ ಕುರಿತು ಮೂಡಲಗಿಯ ತಹಶೀಲ್ದಾರ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಿದರು.

ರಾಜ್ಯದಲ್ಲಿ ಮಳೆಯ ಅಭಾವದಿಂದ ಸರಿಯಾದ ಸಮಯದಲ್ಲಿ ಬೆಳೆ ಬಾರದೆ.ಸಾಕು ಪ್ರಾಣಿಗಳಿಗೆ ಮೇವು ಪೂರೈಸಿಲಾಗದೆ ರೈತರು ಕಂಗಾಲಾಗಿದ್ದಾರೆ. ಒಂದು ಕಡೆ ನೀರಿನ ಕೊರತೆ ಮತ್ತೊಂಡೆದೆ ಆಹಾರ ಸಮಸ್ಯೆಯಿಂದ ಜಾನುವಾರುಗಳನ್ನು ಸಾಕುವದು ಕಷ್ಟಸಾಧ್ಯವಾಗಿದೆ ಈ ಕೂಡಲೆ ಮೂಡಲಗಿ ತಾಲೂಕಿನಲ್ಲಿ ಹಾಗೂ ಜಿಲ್ಲೆಯ ವಿವಿಧ ಭಾಗಗಳಲ್ಲಿ ಮೇವು ಬ್ಯಾಂಕ ಸ್ಥಾಪಿಸಬೇಕು ಎಂದು ಎಲ್ಲ ರೈತರ ಒತ್ತಾಯವಾಗಿದೆ



ಇದರಿಂದ ಸ್ವಲ್ಪ ಪ್ರಮಾಣದಲ್ಲಾದರೂ ಪಶುಗಳನ್ನು ಸಾಕಲು ಸಹಾಯವಾದಿತು. ಸರ್ಕಾರಕ್ಕೆ ಈ ನಮ್ಮ ಸಮಸ್ಯೆಯನ್ನು ಮನವರಿಕೆ ಮಾಡಿ ಕೂಡಲೆ ಮೇವು ಬ್ಯಾಂಕ ಸ್ಥಾಪಿಸಬೇಕು ಮೂರು ನಾಲ್ಕು ದಿನಗಳಲ್ಲಿ ಮೇವು ಭ್ಯಾಂಕ ಸ್ಥಾಪಿಸದಿದ್ದರೆ ರೈತರು ತಾವು ಸಾಕಿರುವ ಜಾನುವಾರುಗಳ ಸಮೇತ ತಹಶೀಲ್ದಾರ ಕಛೇರಿಯ ಮುಂದೆ ಪ್ರತಿಭಟನೆ ಮಾಡುವದಾಗಿ ಮನವಿಯಲ್ಲಿ ತಿಳಿಸಿದ್ದಾರೆ.

ತಹಶೀಲ್ದಾರ ಪರವಾಗಿ ಶಿರಸ್ಥೇದಾರ ಪರಶುರಾಮ ನಾಯ್ಕ ಮನವಿ ಸ್ವೀಕರಿಸಿದರು, ಈ ಸಮಯದಲ್ಲಿ ಜಿಲ್ಲಾ ಸಂಚಾಲಕ ಪಾರೀಶ ಉಪ್ಪಿನ,

ಜಿಲ್ಲಾ ಕಾರ್ಯದರ್ಶಿ ಅಜ್ಜಪ್ಪ ದಾಗನಾಯ್ಕರ, ಜಿಲ್ಲಾ ಸಂಯೋಜಕ ಸಂಗಪ್ಪ ಹಡಪದ, ಸವದತ್ತಿ ತಾಲೂಕಾಧ್ಯಕ್ಷ ಪ್ರಕಾಶ ಸತ್ಯನಾಯ್ಕರ, ತಾಗೌರವಾಧ್ಯಕ್ಷ ಮಹಾದೇವ ಬಂಗೆನ್ನವರ ಹಾಗೂ ಸದಸ್ಯರು ಇದ್ದರೂ.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State